**ಸರ್ವೋಚ್ಚ ನ್ಯಾಯಾಲಯ**

**ಕ್ರಿಮಿನಲ್ ಅಪೀಲು ಅಧಿಕಾರವ್ಯಾಪ್ತಿ**

**ಕ್ರಿಮಿನಲ್ ಅಪೀಲು ಸಂಖ್ಯೆ: 377/2020**

**(ಎಸ್‌ಎಲ್‌ಪಿ (ಕ್ರಿಮಿನಲ್) ಸಂಖ್ಯೆ 5701/2019 ಯಿಂದ ಉದ್ಭವಿಸಿದ್ದು)**

**ಕೆ. ವಿರೂಪಾಕ್ಷ ಮತ್ತು ಇನ್ನೊಬ್ಬರು –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು ***

**ತೀರ್ಪು**

**ನ್ಯಾಯಮೂರ್ತಿ ಶ್ರೀ ಎ.ಎಸ್. ಬೋಪಣ್ಣ:**

ಅನುಮತಿ ನೀಡಲಾಗಿದೆ.

2. ಇದರಲ್ಲಿನ ಅಪೀಲುದಾರರು ದಿನಾಂಕ: 20.01.2019ರ ಆದೇಶದ ಮುಖಾಂತರ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಿಂದ ವಜಾಗೊಂಡ ಕ್ರಿಮಿನಲ್ ಅರ್ಜಿ ಸಂಖ್ಯೆ: 100323/2018ರಲ್ಲಿ ಅರ್ಜಿದಾರರಾಗಿದ್ದರು. ಐ.ಪಿ.ಸಿ. ಪ್ರಕರಣಗಳಾದ 511, 109, 34, 120–ಬಿ, 406, 409, 420, 405, 417 ಮತ್ತು 426ನೇ ಪ್ರಕರಣಗಳಡಿ ಶಿಕ್ಷಾರ್ಹವೆಂದು ಹೇಳಲಾದ ಅಪರಾಧಗಳಿಗೆ ಹುಬ್ಬಳ್ಳಿ ಉಪ–ನಗರ ಪೊಲೀಸ್ ಠಾಣೆಯಿಂದ ಅಪರಾಧ ಸಂಖ್ಯೆ: 152/ 2016ರಲ್ಲಿ ತನಿಖೆಗಾಗಿ ಹಾಗೂ ತತ್ಪರಿಣಾಮವಾದ ಎಫ್‌ಐಆರ್ ದಾಖಲಿಸುವುದಕ್ಕಾಗಿ ವಿಷಯವನ್ನು ಕಳುಹಿಸಿ, ಪಿ.ಸಿ. ಸಂಖ್ಯೆ: 389/2016ರಲ್ಲಿ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ಯಿಂದ ಹೊರಡಿಸಲಾದ ದಿನಾಂಕ: 20.5.2016ರ ಆದೇಶವನ್ನು ವಜಾಗೊಳಿಸಬೇಕೆಂದು ಕೋರಿ, ಸಿಆರ್‌ಪಿಸಿ ಪ್ರಕರಣ 482ರಡಿ ಇದರಲ್ಲಿನ ಅಪೀಲುದಾರರಿಂದ ಸಲ್ಲಿಸಲಾದ ಅರ್ಜಿಯನ್ನು ಪರಿಗಣಿಸುವ ಸಮಯದಲ್ಲಿ ಉಚ್ಚ ನ್ಯಾಯಾಲಯದಿಂದ ಸದರಿ ಆದೇಶವನ್ನು ಹೊರಡಿಸಲಾಯಿತು. ಸದರಿ ವ್ಯವಹರಣೆಗಳಲ್ಲಿ ಇದರಲ್ಲಿನ ಅಪೀಲುದಾರನನ್ನು ಅನುಕ್ರಮವಾಗಿ ಆಪಾದಿತ ಸಂಖ್ಯೆ: 9 ಮತ್ತು 11 ಎಂದು ಗುರುತಿಸಲಾಗಿದೆ, ಇದರಲ್ಲಿನ ಅಪೀಲುದಾರರು ಸಂಬಂಧಪಟ್ಟ ಅವಧಿಯಲ್ಲಿ ಕೆನರಾ ಬ್ಯಾಂಕ್ (ಆಪಾದಿತ ಸಂಖ್ಯೆ: 1)

ಸರ್ಕಲ್ ಆಫೀಸ್, ಹುಬ್ಬಳ್ಳಿ, ಕರ್ನಾಟಕ – ಇಲ್ಲಿ ಉಪ ಪ್ರಧಾನ ವ್ಯವಸ್ಥಾಪರುಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು.

3. ಪ್ರಸ್ತುತ ಸನ್ನಿವೇಶಕ್ಕೆ ಕಾರಣವಾಗುವ ಸಂಕ್ಷಿಪ್ತ ಸಂಗತಿಗಳು ಯಾವುವೆಂದರೆ, ಇದರಲ್ಲಿನ 2ನೇ ಪ್ರತ್ಯಪೀಲುದಾರರು (ಇನ್ನು ಮುಂದೆ 'ದೂರುದಾರ' ಎಂದು ಕರೆಯಲಾಗಿದೆ) ಹುಬ್ಬಳ್ಳಿಯ ಕೆನರಾ ಬ್ಯಾಂಕನ್ನು ಸಂಪರ್ಕಿಸಿದ್ದು, ಅದಕ್ಕನುಸಾರವಾಗಿ ದಿನಾಂಕ: 16.3.2009ರಂದು ಸಾಲ ಸೌಲಭ್ಯಗಳನ್ನು ಮಂಜೂರು ಮಾಡಲಾಯಿತು. ಮಂಜೂರಾದ ಒಟ್ಟು ಸಾಲ ಸೌಲಭ್ಯದ ಮೊತ್ತವು 2.68ಕೋಟಿ ರೂ.ಗಳಾಗಿರುತ್ತದೆ. ಹುಬ್ಬಳ್ಳಿ ಅಂಚಟಗೇರಿ ಗ್ರಾಮದಲ್ಲಿರುವ 3 ಎಕರೆ 2 ಗುಂಟೆ ಅಳತೆಯ ಸರ್ವೆ ಸಂಖ್ಯೆ: 213/2002ನ್ನು ಹೊಂದಿರುವ ಸ್ವತ್ತನ್ನು ಸದರಿ ಸಾಲಕ್ಕೆ ಭದ್ರತೆಯಾಗಿ ನೀಡಲಾಯಿತು ಮತ್ತು ಚಾರ್ಜನ್ನು (ವಿಮೋಚನೆಯನ್ನು) ಸೃಜಿಸಲಾಯಿತು. ಸದರಿ ಸ್ವತ್ತನ್ನು ಇನ್ನು ಮುಂದೆ 'ಭದ್ರತೆಯುಳ್ಳ ಆಸ್ತಿ' ಎಂದು ಕರೆಯಲಾಗಿದೆ. ಕೆನರಾ ಬ್ಯಾಂಕಿನ ವಾದದ ಪ್ರಕಾರ, ದೂರುದಾರನು ಸಾಲದ ಮೊತ್ತವನ್ನು ಮರುಪಾವತಿಸಿಲ್ಲ ಮತ್ತು ಆ ದೃಷ್ಟಿಯಲ್ಲಿ ತಪ್ಪೆಸಗಿದ್ದರಿಂದಾಗಿ, ದೂರುದಾರನ ಖಾತೆಯನ್ನು ದಿನಾಂಕ: 15.1.2013ರಂದು ನಾನ್ ಪರ್ಫಾಮಿಂಗ್ ಅಸೆಟ್ (ಸಂಕ್ಷಿಪ್ತವಾಗಿ ಎನ್‌ಪಿಎ) ಎಂದು ವರ್ಗೀಕರಿಸಲಾಯಿತು. ಕೆನರಾ ಬ್ಯಾಂಕು ಈ ರೀತಿ ಭದ್ರತೀಕರಣ ಮತ್ತು ಹಣಕಾಸು ಆಸ್ತಿಗಳ ಪುನರ್ ರಚನೆ ಹಾಗೂ ಭದ್ರತಾ ಹಿತಾಸಕ್ತಿಗಳ ಜಾರಿ ಅಧಿನಿಯಮ, 2002ರ (ಸಂಕ್ಷಿಪ್ತವಾಗಿ ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮ,) 13(2)ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಪಡೆದುಕೊಂಡಿದ್ದು, ಸೂಕ್ತ ನೋಟೀಸುಗಳನ್ನು ಹೊರಡಿಸಿತು ಹಾಗೂ ಅಂತಿಮವಾಗಿ, ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದ 14ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಲಾದಂತೆ ಭದ್ರತೆಯುಳ್ಳ ಆಸ್ತಿಯ ಸ್ವಾಧೀನವನ್ನು ದಿನಾಂಕ: 22.3.2013ರಂದು ಪಡೆದುಕೊಳ್ಳಲಾಯಿತು. ಆ ನಂತರ, ಭದ್ರತೆಯೊದಗಿಸಿದ ಆಸ್ತಿಯನ್ನು ಮೌಲ್ಯ ನಿರ್ಣಯ ಮಾಡಲಾಯಿತು ಮತ್ತು ಹರಾಜು ದಿನಾಂಕ:

15.11.2013ಎಂದು ಸೂಚಿಸುವ ದಿನಾಂಕ: 13.10.2013ರ ಸಾರ್ವಜನಿಕ ನೋಟೀಸಿನ ಮುಖಾಂತರ ಹರಾಜಿಗೆ ಕರೆಯಲಾಯಿತು. ಭದ್ರತೆಯುಳ್ಳ ಆಸ್ತಿಯ ಮೀಸಲು ಬೆಲೆಯನ್ನು ರೂ.2,28,51,000/–ಕ್ಕೆ ನಿಗದಿಪಡಿಸಲಾಯಿತು. ಪ್ರಕಟಣೆಯನ್ನು ಮಾಡಲಾಗಿದ್ದರೂ ಸಹ ದಿನಾಂಕ: 15.11.2013ರಂದು ಪ್ರಸ್ತಾವಿಸಲಾದ ಹರಾಜಿನಲ್ಲಿ ಯಾವುವೇ ಬಿಡ್‌ಗಳನ್ನು ಸ್ವೀಕರಿಸಿರುವುದಿಲ್ಲ ಹಾಗೂ ಅದೇ ದಿನವನ್ನು ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ರಜಾ ದಿನವೆಂದು ಘೋಷಿಸಿದ್ದುದರಿಂದ ಹರಾಜನ್ನು ದಿನಾಂಕ: 04.12.2013ಕ್ಕೆ ಮುಂದೂಡಲಾಯಿತು. ಸದರಿ ದಿನದಂದು ಸಹ ಯಾವುವೇ ಬಿಡ್‌ಗಳನ್ನು ಸ್ವೀಕರಿಸಿರುವುದಿಲ್ಲ.

4. ತದನುಸಾರವಾಗಿ, ಕೆನರಾ ಬ್ಯಾಂಕು ಈ ಮುಂಚಿನ ಹೆಚ್ಚಿನ ದರದ ಮೀಸಲು ಬೆಲೆಯು ಖರೀದಿದಾರರನ್ನು ಆಕರ್ಷಿಸಿರದಿದ್ದುದರಿಂದ, ಮೀಸಲು ಬೆಲೆಯು ರೂ.1.10ಕೋಟಿ ಎಂದು ಸೂಚಿಸಿ, ಮೌಲ್ಯವನ್ನು ಪರಿಷ್ಕರಿಸಿತು ಹಾಗೂ ದಿನಾಂಕ: 30.12.2013ರ ಹೊಸ ಹರಾಜು ನೋಟೀಸನ್ನು ಹೊರಡಿಸಿತು. ಅಂಥ ಕ್ರಮದಿಂದ ಬಾಧಿತನಾಗಿರುವುದಾಗಿ ಕ್ಲೇಮು ಮಾಡುವ ದೂರುದಾರನು ರಿಟ್ ಅರ್ಜಿ ಸಂಖ್ಯೆ: 100382/2014ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠದ ಮುಂದೆ ಸಲ್ಲಿಸಲಾದ ರಿಟ್ ಅರ್ಜಿಯಲ್ಲಿ ಹರಾಜು ನೋಟೀಸನ್ನು ಖಂಡಿಸಿದ್ದಾನೆ. ಮಾನ್ಯ ಏಕಪೀಠ ನ್ಯಾಯಾಧೀಶರು ವಿಷಯವನ್ನು ಪರಿಗಣಿಸಿದ್ದು, ದೂರುದಾರನಿಂದ ಮಂಡಿಸಲಾದ ವಾದಗಳನ್ನು ಗಮನಕ್ಕೆ ತೆಗೆದುಕೊಳ್ಳುವುದರ ಜೊತೆಗೆ ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದ ಅಡಿಯಲ್ಲಿ ದೂರುದಾರನಿಗೆ ಲಭ್ಯವಿರುವ ಪರ್ಯಾಯ ಪರಿಹಾರವನ್ನು ಸಹ ಪರಿಗಣನೆಗೆ ತೆಗೆದುಕೊಂಡಿರುತ್ತಾರೆ ಮತ್ತು ತದನುಸಾರವಾಗಿ, ದಿನಾಂಕ: 22.01.2014ರಂದು ರೂ.10,000/– ವೆಚ್ಚದೊಂದಿಗೆ ರಿಟ್ ಅರ್ಜಿಯನ್ನು ವಜಾಗೊಳಿಸಿರುತ್ತಾರೆ. ದೂರುದಾರನು ರಿಟ್ ಅಪೀಲು ಸಂಖ್ಯೆ: 100349/2014ರಲ್ಲಿ ವಿಭಾಗೀಯ ಪೀಠದ ಮುಂದೆ ರಿಟ್ ಅಪೀಲನ್ನು ಸಲ್ಲಿಸುವ ಮೂಲಕ ಸದರಿ ಆದೇಶವನ್ನು

ಖಂಡಿಸಿದ್ದಾನೆ. ವಿಭಾಗೀಯ ಪೀಠವು ದಿನಾಂಕ: 19.8.2014ರ ಆದೇಶದ ಮೂಲಕ ರಿಟ್ ಅಪೀಲನ್ನು ವಜಾಗೊಳಿಸಿರುತ್ತದೆ. ಆ ನಂತರ, ದೂರುದಾರನು ಐಆರ್‌ಸಂಖ್ಯೆ: 3044/2014 (ಎಸ್‌ಎ) ಯಲ್ಲಿ ಅರ್ಜಿಯನ್ನು ಸಲ್ಲಿಸುವ ಮೂಲಕ ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದ 17(1)ನೇ ಪ್ರಕರಣದಡಿಯಲ್ಲಿ ಮತ್ತು ಅದರೊಂದಿಗೇ ಐ.ಎ.ಸಂಖ್ಯೆ: 4482/2014ನ್ನು ಹೊಂದಿರುವ ಕಾಲಪರಿಮಿತಿ ಅಧಿನಿಯಮದ 5ನೇ ಪ್ರಕರಣದ ಅಡಿಯಲ್ಲಿ ಅರ್ಜಿ ಸಲ್ಲಿಸುವುದರೊಂದಿಗೆ ಸಹ ಪರಿಹಾರವನ್ನು ಪಡೆದಿದ್ದಾನೆ. ವಿಳಂಬವನ್ನು ಮನ್ನ ಮಾಡಲು ಕೋರಿರುವ ಅರ್ಜಿಯನ್ನು ಮತ್ತು ತತ್ಪರಿಣಾಮವಾಗಿ ಮುಖ್ಯ ಅರ್ಜಿಯನ್ನು ಋಣವಸೂಲಿ ನ್ಯಾಯಾಧಿಕರಣವು (ಸಂಕ್ಷಿಪ್ತವಾಗಿ 'ಡಿಆರ್‌ಟಿ') ದಿನಾಂಕ: 12.06.2015ರ ತನ್ನ ಆದೇಶದ ಮುಖಾಂತರ ವಜಾಗೊಳಿಸಿದೆ. ಅದಕ್ಕನುಸಾರವಾಗಿ, ದೂರುದಾರನು ಚೆನ್ನೈನ ಋಣ ವಸೂಲಿ ಅಪೀಲು ನ್ಯಾಯಾಧಿಕರಣದ (ಸಂಕ್ಷಿಪ್ತವಾಗಿ 'ಡಿಆರ್‌ಎಟಿ') ಮುಂದೆ ಅಪೀಲು ಹೂಡಿರುವುದಾಗಿ ಹೇಳಲಾಗಿದ್ದು, ಅದನ್ನೂ ಸಹ ವಜಾಗೊಳಿಸುವುದಾಗಿ ಹೇಳಲಾಗಿದೆ.

5. ಸದರಿ ಹಿನ್ನೆಲೆಯಲ್ಲಿ ಕೆನರಾ ಬ್ಯಾಂಕಿನ ಅಧಿಕಾರಿಗಳು ಹರಾಜು ಖರೀದಿದಾರನಿಗೆ ಅನುಕೂಲವಾಗುವಂತೆ, ದೂರುದಾರನಿಗೆ ತಪ್ಪಿನಿಂದ ಕೂಡಿದ ನಷ್ಟವನ್ನುಂಟುಮಾಡಿದ್ದಾರೆಂದು ಆಪಾದಿಸಿ ಪಿ.ಸಿ.ಸಂಖ್ಯೆ: 389/2016ರಲ್ಲಿ ಹುಬ್ಬಳ್ಳಿಯ ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಹಾಗೂ ಜೆಎಂಎಫ್‌ಸಿ – ಈ ನ್ಯಾಯಾಲಯದಲ್ಲಿ ದೂರುದಾರನು 'ಸಿಆರ್‌ಪಿಸಿ'ಯ 200ನೇ ಪ್ರಕರಣದಡಿ ದೂರನ್ನು ಸಲ್ಲಿಸಿದ್ದಾನೆ. ಸದರಿ ದೂರಿಗೆ, ಕೆನರಾ ಬ್ಯಾಂಕ್ ಹೊರತುಪಡಿಸಿ, ಉನ್ನತ ವರ್ಗದ ಅಧಿಕಾರಿಗಳು, ಇದರಲ್ಲಿ ಅಪೀಲುದಾರರು, ಮೌಲ್ಯಮಾಪಕರು ಮತ್ತು ಹರಾಜು ಖರೀದಿದಾರರನ್ನು ಆಪಾದಿತರೆಂದು ತೋರಿಸಲಾಯಿತು. ಸದರಿ ದೂರನ್ನು ದಾಖಲೆಯಾಗಿ ಪರಿಗಣಿಸಿ, ಮಾನ್ಯ ಮ್ಯಾಜಿಸ್ಟ್ರೇಟರು 'ಸಿಆರ್‌ಪಿಸಿ'ಯ 156(3)ನೇ ಪ್ರಕರಣದಡಿ ಅದನ್ನು ತನಿಖೆಗೆ ಕಳುಹಿಸುವಂತೆ ಹಾಗೂ ವರದಿ ಸಲ್ಲಿಸುವಂತೆ ತಿಳಿಸಿದರು. ಅಂಥ ನಿರ್ದೇಶನದ ಮೇರೆಗೆ, ಎಫ್‌ಐಆರ್ ಸಂಖ್ಯೆ:

0152/2016ನ್ನು ದಾಖಲಿಸಲಾಗಿದೆ. ಆದುದರಿಂದ, ಅಪೀಲುದಾರನು ಬಾಧಿತರಾಗಿರುವುದಾಗಿ ಕ್ಲೇಮು ಮಾಡಿ, ಕ್ರಿಮಿನಲ್ ಅರ್ಜಿ ಸಂಖ್ಯೆ: 100323/2018ರಲ್ಲಿ 'ಸಿಆರ್‌ಪಿಸಿ'ಯ 482ನೇ ಪ್ರಕರಣದಡಿ ಕ್ರಿಮಿನಲ್ ಅರ್ಜಿಯನ್ನು ಸಲ್ಲಿಸಿದ್ದು, ಅದನ್ನು ದಿನಾಂಕ: 21.01.2019ರ ಆದೇಶದ ಮೂಲಕ ಉಚ್ಚ ನ್ಯಾಯಾಲಯವು ವಜಾ ಮಾಡಿತು. ಅದನ್ನು ಇದರಲ್ಲಿ ಖಂಡಿಸಲಾಗಿದೆ.

6. ಅಪೀಲುದಾರರ ಪರ ಹಾಜರಾದ ಮಾನ್ಯ ವಕೀಲ ಶ್ರೀ ಬ್ರಿಜೇಶ್ ಕುಮಾರ್ ಟಂಬರ್, ದೂರುದಾರನ ಪರ ಮಾನ್ಯ ಹಿರಿಯ ವಕೀಲರಾದ ಮಿಸ್. ಕಿರಣ್‌ಸೂರಿ, ಕರ್ನಾಟಕ ರಾಜ್ಯ ಪರ ಮಾನ್ಯ ವಕೀಲರಾದ ಶ್ರೀ ಶುಭಾಂಶು ಪಧಿಯವರ ವಾದಗಳನ್ನು ಆಲಿಸಲಾಯಿತು ಮತ್ತು ಅಪೀಲು ಪತ್ರಗಳನ್ನು ಅವಗಾಹಿಸಲಾಯಿತು.

7. ಅಪೀಲುದಾರರ ಪರ ಮಾನ್ಯ ವಕೀಲರು, ದೂರುದಾರ ಮತ್ತು ಕೆನರಾ ಬ್ಯಾಂಕ್ ನಡುವಿನ ವ್ಯವಹಾರದಲ್ಲಿ ಯಾವುದೇ ಪಾತ್ರ ವಹಿಸದಿರುವ, ಡೆಪ್ಯೂಟಿ ಜನರಲ್ ಮ್ಯಾನೇಜರ್‌ಗಳಾಗಿರುವ ಹಾಗೂ ಸರ್ಕಲ್ ಆಫೀಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಪೀಲುದಾರರನ್ನು ಹೊರತುಪಡಿಸಿ, ಹಾಗಿಲ್ಲದಿದ್ದರೂ, ಸದ್ಯದ ಸ್ವರೂಪದ ಕ್ರಿಮಿನಲ್ ಕ್ರಮವನ್ನು ಎದುರಿಸುವ ಬಾಧ್ಯತೆಯನ್ನು ಹೊರಲು ಸಾಧ್ಯವಾಗದು ಎಂದು ವಾದಿಸಿದ್ದಾರೆ. ಸಾಲದ ವ್ಯವಹಾರ ಮತ್ತು ಸಾಲದ ಮರುಪಾವತಿ ಮಾಡಿಲ್ಲದ ಕಾರಣಕ್ಕೆ ಖಾತೆಯನ್ನು ಎನ್‌ಪಿಎ ಎಂದು ಪರಿಗಣಿಸಿರುವುದನ್ನು ವಿವಾದಿತಗೊಳಿಸಲಾಗದು ಎಂದು ವಾದಿಸಲಾಗಿದೆ. ಆ ಸನ್ನಿವೇಶದಲ್ಲಿ, ಸ್ವತ್ತಿನ ಮಾರಾಟದ ಹಂತದವರೆಗೆ, ಕೈಗೊಳ್ಳಲಾದ ಇಡೀ ಕ್ರಮವು, ಕೇವಲ ಕಾರ್ಯವಿಧಾನವಷ್ಟೇ ಅಲ್ಲದೆ, ಸಂಬಂಧಪಟ್ಟ ಪಕ್ಷಕಾರರ ಕುಂದುಕೊರತೆಗಳ ನಿವಾರಣೆಗಾಗಿಯೂ ಸಹ ಉಪಬಂಧಿಸಲಾದ ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದ ಉಪಬಂಧಗಳಡಿ ವಿನಿಯಮಿಸಲಾದಂತೆ ಇದೆ. ಆ ಸನ್ನಿವೇಶದಲ್ಲಿ, ದೂರುದಾರನು ಮಾಡಬಹುದೆಂದು ನಿರೀಕ್ಷಿಸಲಾದಂತೆ ತೊಂದರೆಗಳನ್ನು ಗಮನಕ್ಕೆ ತೆಗೆದುಕೊಂಡಿದ್ದರೂ ಸಹ, ಅದರಿಂದಲೇ ಕ್ರಿಮಿನಲ್

ದೂರನ್ನು ನಿರ್ವಹಿಸುವುದಕ್ಕೆ ಆಧಾರವನ್ನು ರೂಪಿಸಲಾಗದು ಮತ್ತು ಅಂಥ ಸಂದರ್ಭದಲ್ಲಿ ಮಾನ್ಯ ಮ್ಯಾಜಿಸ್ಟ್ರೇಟರು ವಿವೇಚನೆಯಿಲ್ಲದೆ, 'ಸಿಆರ್‌ಪಿಸಿ'ಯ 156(3)(ನೇ ಪ್ರಕರಣದಡಿ ತನಿಖೆಗೆ ನಿರ್ದೇಶಿಸಿದ್ದು, ಅದರ ಎಫ್‌ಐಆರ್ ದಾಖಲು ಮಾಡುವುದಕ್ಕೆ ಕಾರಣವಾಗಿದೆ. ಕೆನರಾಬ್ಯಾಂಕು ಕೈಗೊಂಡ ಕ್ರಮಕ್ಕೆ ಸಂಬಂಧಿಸಿದಂತೆ, ದೂರುದಾರನು, ವಾಸ್ತವವಾಗಿ, ರಿಟ್ ಅರ್ಜಿ, ರಿಟ್ ಅಪೀಲು ಮತ್ತು ಆ ನಂತರ 'ಡಿಆರ್‌ಟಿ' ಹಾಗೂ 'ಡಿಆರ್‌ಎಟಿ' ಮುಂದೆ ವ್ಯವಹರಣೆಗಳನ್ನು ದಾಖಲಿಸುವ ಪರಿಹಾರವನ್ನು ಹೊಂದಿದ್ದಾನೆಂದು ಮತ್ತು ಅದರಲ್ಲಿ ವಿಫಲನಾಗಿದ್ದು, ಪ್ರಾಮಾಣಿಕವಲ್ಲದ ಹಾಗೂ ಕಾನೂನಿನಲ್ಲಿ ಸಮರ್ಥನೀಯವಲ್ಲದ ಕ್ರಿಮಿನಲ್ ಕಾನೂನನ್ನು ನಡೆಸುತ್ತಿದ್ದಾನೆಂದು ವಾದಿಸಲಾಗಿದೆ. ಕರ್ನಾಟಕ ಉಚ್ಚ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು ವಿಷಯವನ್ನು ಸರಿಯಾದ ರೀತಿಯಲ್ಲಿ ಗುಣಾವಗುಣ ವಿವೇಚನೆ ಮಾಡಿಲ್ಲ. ಬದಲಿಗೆ, ಮಾನ್ಯ ನ್ಯಾಯಾಧೀಶರು, ತನಿಖೆಯು ಅಪೀಲುದಾರರನ್ನು ಪೂರ್ವಗ್ರಹಗೊಳಿಸುವುದಿಲ್ಲವೆಂಬ ತೀರ್ಮಾನಕ್ಕೆ ಬಂದಿದ್ದು, ಅದು ಸಮರ್ಥನೀಯವಾಗಿಲ್ಲ. ಒಬ್ಬ ತಪ್ಪಿತಸ್ಥನ ವಿರುದ್ಧ ಕ್ರಮ ಕೈಗೊಂಡಾಗ, ಸದ್ಯದ ಕ್ರಮವು ಅನುಮತೀಯವಾಗಿದ್ದಲ್ಲಿ, ಅಧಿಕೃತ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ ಮತ್ತು ಅದರಂತೆ, ಸದ್ಯದ ಪ್ರಕರಣವು ಮಧ್ಯಪ್ರವೇಶ ಅಗತ್ಯವಿರುವ ಯೋಗ್ಯ ಪ್ರಕರಣವಾಗಿದೆ. ಆದರೆ, ಉಚ್ಚ ನ್ಯಾಯಾಲಯವು ವಿಷಯದ ಈ ಅಂಶವನ್ನು ವಿವೇಚಿಸಲು ವಿಫಲವಾಗಿದೆ ಎಂದು ವಾದಿಸಲಾಗಿದೆ. ಅಷ್ಟೇ ಅಲ್ಲದೆ, ಮಾನ್ಯ ನ್ಯಾಯಾಧೀಶರು, ಕೇವಲ ಕೆಲ ಇತರ ಆಪಾದಿತರು ಕ್ರಿಮಿನಲ್ ಅರ್ಜಿ ಸಂಖ್ಯೆ: 101258/2016 ಮತ್ತು ಕ್ರಿಮಿನಲ್ ಅರ್ಜಿ ಸಂಖ್ಯೆ: 101162/2016ರಲ್ಲಿ ಸಲ್ಲಿಸಿದ ಇತರ ಅರ್ಜಿಗಳನ್ನು ವಜಾಗೊಳಿಸಲಾಯಿತೆಂಬ ಕಾರಣಕ್ಕೆ ಅಪೀಲುದಾರರು ಸಲ್ಲಿಸಿದ ಅರ್ಜಿಯನ್ನು ನಿರಾಕರಿಸುವಲ್ಲಿ ಸಮರ್ಥನೀಯರಾಗಿಲ್ಲವೆಂದು ಸಹ ಎತ್ತಿ ತೋರಿಸಲಾಗಿದೆ ಹಾಗೂ ಅಂತಿಮ ವರದಿಯನ್ನು ಸಲ್ಲಿಸಲು ಪೊಲೀಸರಿಗೆ ನಿರ್ದೇಶನ ನೀಡಲಾಗಿದೆ.

8. ಇನ್ನೊಂದು ಕಡೆಯಲ್ಲಿ, ದೂರುದಾರನ ಪರ ಮಾನ್ಯ ಹಿರಿಯ ವಕೀಲರು, 1ನೇ ಮತ್ತು 12ನೇ ಆಪಾದಿತರಿಗೆ ಸಂಬಂಧಪಡುವಷ್ಟರಮಟ್ಟಿಗೆ, ಉಚ್ಚ ನ್ಯಾಯಾಲಯದಿಂದ ವಜಾಗೊಂಡ ಒಂದೇ ರೀತಿಯ ಕ್ರಿಮಿನಲ್ ಅರ್ಜಿಗಳ ಮೇಲೆ ಅವಂಬಿತರಾಗಿದ್ದಾರೆ. ರೂ.2.68ಕೋಟಿಗಳ ಸಾಲ ಮಂಜೂರಾಗಿದ್ದರೂ, ರೂ.90 ಲಕ್ಷಗಳ ಮೊತ್ತ ಮಾತ್ರವೇ ಬಟವಾಡೆಯಾಗಿದ್ದು, ಉಳಿದ ಮೊತ್ತವು ಮರುಪಾವತಿಗೆ ಹೊಂದಾಣಿಕೆ ಮಾಡಲಾಯಿತು ಎಂದು ವಾದಿಸಲಾಗಿದೆ. ಅಷ್ಟೇ ಅಲ್ಲದೆ, ರೂ.4 ಕೋಟಿಗಳಿಗಿಂತಲೂ ಹೆಚ್ಚು ಬೆಲೆಬಾಳುವ ಭದ್ರತೆಯುಳ್ಳ ಆಸ್ತಿಯನ್ನು ಕಡಿಮೆಯಾಗಿ ಮೌಲ್ಯ ನಿಗದಿ ಮಾಡಲಾಯಿತು ಮತ್ತು ಅಂತಿಮವಾಗಿ ಆಪಾದಿತ ಸಂಖ್ಯೆ: 15 ಎಂದು ಹೇಳಲಾದ ಹರಾಜು ಖರೀದಿದಾರನಿಗೆ ಅನುಕೂಲವಾಗುವಂತೆ ರೂ.1.10 ಕೋಟಿಗಳಿಗೆ ಮಾರಲಾಯಿತು ಎಂದು ವಾದಿಸಲಾಗಿದೆ. ಅಷ್ಟೇ ಅಲ್ಲದೆ, ಅಡಮಾನ ಇಟ್ಟಿರುವ ಸ್ವತ್ತನ್ನು ಕಡಿಮೆ ಮೌಲ್ಯ ನಿರ್ಣಯ ಮಾಡಿರುವುದಷ್ಟೇ ವಿವಾದವಾಗಿರುವುದಲ್ಲದೆ, ಇಡೀ ಸಾಲದ ಬಟವಾಡೆ ಮಾಡದಿರುವ ಬಗೆಗಿನ ವಿವಾದ ಮತ್ತು ಒಂದು ಸಲದ ಇತ್ಯರ್ಥಕ್ಕಾಗಿ (ಸಂಕ್ಷಿಪ್ತವಾಗಿ ಒಟಿಎಸ್) ದೂರುದಾರನು ಮಾಡಿದ ಮೂರು ನಿವೇದನೆಗಳನ್ನು ಪರಿಗಣಿಸದಿರುವುದು – ಇವು ತನಿಖೆ ನಡೆಯಬೇಕಾದಂಥ ಎಲ್ಲಾ ವಿಷಯಗಳಾಗಿವೆಯೆಂದು ವಾದಿಸಲಾಗಿದೆ. ಅಂಥ ಸನ್ನಿವೇಶದಲ್ಲಿ, ಮಾನ್ಯ ಮ್ಯಾಜಿಸ್ಟ್ರೇಟರಿಂದ ಆದೇಶಿಸಲಾದಂತೆ ತನಿಖೆಯು ಸಮರ್ಥನೀಯವಾಗಿರುತ್ತದೆ ಮತ್ತು ಉಚ್ಚ ನ್ಯಾಯಾಲಯವು ಈ ಹಂತದಲ್ಲಿ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದರಿಂದ ಸಮುಚಿತವಾಗಿಯೇ ನಿರ್ಬಂಧಿಸಲ್ಪಟ್ಟಿದೆಯೆಂದು ವಾದಿಸಲಾಗಿದೆ. ಆದುದರಿಂದ, ಅಪೀಲುದಾರರಿಂದ ಸದ್ಯದ ಅಪೀಲಿನಲ್ಲಿ ಮಂಡಿಸಲಾದಂತೆ ಈ ವಾದವು ಪರಿಗಣನೆಗೆ ಯೋಗ್ಯವಾಗಿಲ್ಲ ಹಾಗೂ ಈ ಅಪೀಲು ತಿರಸ್ಕರಿಸಲು ತಕ್ಕುದಾಗಿದೆಯೆಂದು ವಾದಿಸಲಾಗಿದೆ. ಮಾನ್ಯ ಮ್ಯಾಜಿಸ್ಟ್ರೇಟರಿಂದ ನೀಡಲಾದ ನಿರ್ದೇಶನಕ್ಕನುಸಾರವಾಗಿ ಎಫ್ಐಆರ್ ದಾಖಲಾಗಿರುತ್ತದೆ ಮತ್ತು ತನಿಖೆಯು ಪ್ರಗತಿಯಲ್ಲಿದೆ ಹಾಗೂ ಈ ಕಾರಣದಿಂದ, ಇದನ್ನು ಅದರ ತರ್ಕಬದ್ಧ ನಿರ್ಣಯವನ್ನು ಕೈಗೊಳ್ಳಲು ಅನುಮತಿ ಸಿಗಲೆಂದು ಕರ್ನಾಟಕ ರಾಜ್ಯದ ಮಾನ್ಯ ವಕೀಲರು ವಾದಿಸಿರುತ್ತಾರೆ.

9. ಪಕ್ಷಕಾರರ ಪರವಾಗಿ ಮಂಡಿಸಲಾದ ಪರಸ್ಪರ ವಿರೋಧದ ವಾದಗಳನ್ನು ಪ್ರಸ್ತಾಪಿಸುವ ಮುನ್ನ, ದೂರುದಾರನ ಪರ ಮಾನ್ಯ ವಕೀಲರಿಂದ ಪರಿಶೀಲನೆಗಾಗಿ ಮಂಡಿಸಿದ **ಹರಿಯಾಣ ರಾಜ್ಯ –ವಿರುದ್ಧ– ಭಜನ್‌ಲಾಲ್ (1992) ಎಸ್‌ಯುಪಿಪಿ (1) ಎಸ್‌ಸಿಸಿ 335ರ** ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪನ್ನು ನಾವು ಯಥಾವತ್ತಾಗಿ ಇಟ್ಟಿದ್ದು, ಅದು ಕ್ರಿಮಿನಲ್ ವ್ಯವಹರಣೆಯನ್ನು ರದ್ದುಪಡಿಸುವ ಅಸಾಧಾರಣ ಅಧಿಕಾರ/ಅಂತರ್ಗತ ಅಧಿಕಾರವನ್ನು ಚಲಾಯಿಸುವಾಗ ದೃಷ್ಟಿಯಲ್ಲಿಟ್ಟುಕೊಳ್ಳಬೇಕಾದಂಥ ಮಾನದಂಡಗಳನ್ನು ರೂಪಿಸುತ್ತದೆ. ಮಾನದಂಡಗಳನ್ನು ಹೇಳಿದ ಮೇಲೆ, ಈ ನ್ಯಾಯಾಲಯವು, ಒಂದು ಕ್ರಿಮಿನಲ್ ವ್ಯವಹರಣೆಯನ್ನು ರದ್ದುಪಡಿಸುವ ಅಧಿಕಾರವು ಬಹಳ ಪರಿಮಿತವಾಗಿರತಕ್ಕದ್ದು ಮತ್ತು ಅದರಲ್ಲೂ ಅಪರೂಪದ ಪ್ರಕರಣಗಳಲ್ಲಿ ಜಾಗರೂಕವಾಗಿರತಕ್ಕದ್ದು ಎಂದು ಎಚ್ಚರಿಕೆಯನ್ನು ನೀಡಿದೆ. ಆ ಹಿನ್ನೆಲೆಯಲ್ಲಿ, ವ್ಯವಹರಣೆಯ ಸ್ವರೂಪವನ್ನು ಮತ್ತು ಹಿಂದಿನ ವ್ಯವಹರಣೆಗಳು ಅದೇ ವಸ್ತುವಿಷಯದ ಮೇಲೆ ಅವಲಂಬಿಸಿದ್ದ ರೀತಿಯನ್ನು ಗಮನದಲ್ಲಿಟ್ಟುಕೊಂಡು, ಈಗಿನ ಸನ್ನಿವೇಶವನ್ನು ಪರಿಗಣಿಸಬೇಕಾದ ಅಗತ್ಯತೆಯಿದೆ.

10. ಗಮನಿಸಲಾದಂತೆ, ದೂರುದಾರನು ಹಣಕಾಸು ನೆರವಿಗಾಗಿ ಕೆನರಾ ಬ್ಯಾಂಕಿನ ಮೊರೆ ಹೋಗಿರುತ್ತಾನೆ. ಇದರಲ್ಲಿನ ಅಪೀಲುದಾರರು ಸರ್ಕಲ್ ಆಫೀಸ್‌ನಲ್ಲಿ ಅಧಿಕಾರಿಗಳಾಗಿದ್ದರು ಎಂಬುದು ನಿರ್ವಿವಾದದ ಸಂಗತಿಯಾಗಿದೆ. ದೂರುದಾರನು ದಿನಾಂಕ: 16.3.2009ರಂದು ರೂ.2.68ಕೋಟಿಗಳ ಮೊತ್ತದ ಸಾಲಸೌಲಭ್ಯವನ್ನು ಪಡೆದಿರುತ್ತಾನೆ. ರೂ. 2.68ಕೋಟಿಗಳ ಇಡೀ ಮೊತ್ತ ಬಿಡುಗಡೆಯಾಗಿರಲಿಲ್ಲ, ಆದರೆ ರೂ. 90 ಲಕ್ಷಗಳ ಮೊತ್ತ ಮಾತ್ರ ಬಿಡುಗಡೆಯಾಗಿತ್ತು ಮತ್ತು ಉಳಿದ ಮೊತ್ತವನ್ನು ಮರುಪಾವತಿಯಾಗಿ ಹೊಂದಾಣಿಕೆ ಮಾಡಲಾಗಿರುತ್ತದೆಯೆಂದು ದೂರುದಾರನು ವಾದಿಸಿದ್ದರೂ, ಆ ವಿಷಯ ಮತ್ತು ಒಟಿಎಸ್ ಅನ್ನು ಪರಿಗಣಿಸದಿರುವುದಕ್ಕೆ ಸಂಬಂಧಿಸಿ ಮಂಡಿಸಲಾದಂತೆ ಇತರ ವಿಷಯಗಳು, ಹಾಗೆಯೇ ಯಾವ ಮೌಲ್ಯಕ್ಕೆ ಸ್ವತ್ತು ಮಾರಾಟವಾಯಿತೋ ಆ ಮೌಲ್ಯ, ಹಾಗೂ ಅದು ಮಾರಾಟಗೊಂಡ ವಿಧಾನ ಇವುಗಳನ್ನು ಆ ಕಾರ್ಯವು

ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದಡಿ ಆಧಾರಪಟ್ಟಾಗ ಮತ್ತು ನಿಯಂತ್ರಿಸಲ್ಪಟ್ಟಾಗ, ಕೇವಲ ಆಪಾದನೆಗಳನ್ನು ಮಾಡಲಾಗಿದೆ ಹಾಗೂ ಭಾರತ ದಂಡ ಸಂಹಿತೆಯ ಕೆಲವು ಪ್ರಕರಣಗಳು ಅನ್ವಯಿಸುತ್ತವೆ ಎಂಬ ಕಾರಣಕ್ಕೆ, ಪೊಲೀಸರು ತನಿಖೆ ಮಾಡಿರಬಹುದೆ? ಎಂಬುದು ಪ್ರಶ್ನೆಯಾಗಿರುತ್ತದೆ. ಘಟನೆಗಳ ಸರಣಿಯನ್ನು ಗಮನಿಸುವಾಗ, ಭದ್ರತೆಯೊದಗಿಸಿದ ಆಸ್ತಿಯನ್ನು ದಿನಾಂಕ: 31.1.2014ರಂದು ನಡೆಸಲಾದ ಹರಾಜಿನಲ್ಲಿ ಮಾರಿದ್ದರೂ ಮತ್ತು ಕ್ರಿಮಿನಲ್ ದೂರಿನಲ್ಲಿ ಈ ಹಂತದಲ್ಲಿ ಮುಂದಿಡಲು ಅಪೇಕ್ಷಿಸಿದಂತೆ ಕುಂದುಕೊರತೆಗಳು ಆ ಪರಿಸ್ಥಿತಿಯಲ್ಲೂ ಇದ್ದವು, ದೂರನ್ನು ಕೂಡಲೇ ದಾಖಲಿಸಲಾಯಿತೆಂದು ಅರ್ಥವಲ್ಲ. ಇನ್ನೊಂದು ಕಡೆಯಲ್ಲಿ, ದಿನಾಂಕ: 13.10.2013ರ ಕರಾರು ನೋಟೀಸನ್ನು ನೀಡಿದ್ದಾಗ, ಯಾವುದೇ ನ್ಯಾಯಿಕ ವೇದಿಕೆಯ ಮುಂದೆ ದೂರುದಾರನು ಯಾವುದೇ ಕುಂದುಕೊರತೆಯ ಬಗ್ಗೆ ದೂರು ನೀಡಿಲ್ಲ. ಹಾಗಿದ್ದರೂ, ಖರೀದಿದಾರರ ಅಭಾವದಿಂದಾಗಿ ಆ ಮಾರಾಟವು ನಡೆಯಲಿಲ್ಲ ಮತ್ತು ರೂ.1.10ಕೋಟಿಗಳ ಮೀಸಲು ಬೆಲೆಯನ್ನು ಸೂಚಿಸಿ, ದಿನಾಂಕ: 30.12.2013ರ ಹೊಸ ಹರಾಜು ನೋಟೀಸನ್ನು ನೀಡಲಾಯಿತು.

11. ಆ ಹಂತದಲ್ಲಿ ದೂರುದಾರನು ರಿಟ್ ಅರ್ಜಿ ಸಂಖ್ಯೆ: 100382/2014ರಲ್ಲಿ ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿ ಸಲ್ಲಿಸಿದ ರಿಟ್ ಅರ್ಜಿಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠದ ಮೊರೆಹೋಗಿರುತ್ತಾನೆ. ದಿನಾಂಕ: 30.12.2013ರ ಹರಾಜು ನೋಟೀಸನ್ನು ಅದರಲ್ಲಿ ಪ್ರಶ್ನಿಸಲಾಗಿರುತ್ತದೆ. ಆಪಾದನೆಯನ್ನು 'ಸಿಆರ್‌ಪಿಸಿ'ಯ 200ನೇ ಪ್ರಕರಣದಡಿ ದಾಖಲಿಸಲಾದ ದೂರಿನಲ್ಲಿ ಮಂಡಿಸಲು ಈಗ ಅಪೇಕ್ಷಿಸಲಾಗಿದ್ದು, ಅದರಲ್ಲಿ ಇತರರೊಂದಿಗೆ ಇದರಲ್ಲಿನ ಅಪೀಲುದಾರರು ಭದ್ರತೆಯುಳ್ಳ ಆಸ್ತಿಗಳನ್ನು ಕಡಿಮೆ ಮೌಲ್ಯ ನಿಗದಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ಆಪಾದನೆಗೊಳಗಾಗಿರುವುದು ಸದರಿ ರಿಟ್ ಅರ್ಜಿಯಲ್ಲಿ ಮಂಡಿಸಲಾಗಿದ್ದಂಥ ಅದೇ ವಾದವೇ ಆಗಿತ್ತು. ಭದ್ರತೆಯುಳ್ಳ ಆಸ್ತಿಯ ಸಂಬಂಧದಲ್ಲಿ ಮೀಸಲು ಬೆಲೆಯು ಮೂಲತಃ ರೂ.228.51ಲಕ್ಷಗಳಿಗೆ ನಿಗದಿ ಮಾಡಲಾಗಿತ್ತು, ಆ ನಂತರ, ನಡೆಸಲಾದ ತರುವಾಯದ ಹರಾಜಿನಲ್ಲಿ ಅದನ್ನು ರೂ.1.10 ಕೋಟಿಗಳಿಗೆ

ನಿಗದಿಪಡಿಸಲಾಗಿತ್ತು ಎಂಬ ವಾದವನ್ನು ಸದರಿ ರಿಟ್ ಅರ್ಜಿಯಲ್ಲಿ ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರು ಗಮನಿಸಿರುತ್ತಾರೆ ಹಾಗೂ ಆ ನಂತರ, ಈ ಕೆಳಗಿನಂತೆ ತೀರ್ಮಾನಿಸಿದ್ದಾರೆ.

> " ನಿರ್ವಿವಾದವಾಗಿ, ಅರ್ಜಿದಾರನು ಸಾಲಗಾರನಾಗಿದ್ದಾನೆ ಮತ್ತು ಅವನು ಅಧಿಕಾರ ವ್ಯಾಪ್ತಿಯ ಸಾಲ ವಸೂಲಿ ನ್ಯಾಯಾಧಿಕರಣದಿಂದ ಹೊರಡಿಸಲಾದ ಆದೇಶದಿಂದ ಬಾಧಿತನಾಗಿದ್ದಾನೆ. ಬೆಂಗಳೂರಿನ ಸಾಲ ವಸೂಲಿ ನ್ಯಾಯಾಧಿಕರಣವು ಸದರಿ ಮೊತ್ತವನ್ನು ವಸೂಲಿ ಮಾಡಲು ಪ್ರತ್ಯರ್ಜಿದಾರ ಬ್ಯಾಂಕಿನ ಪರವಾಗಿ ವಸೂಲಿ ಪ್ರಮಾಣಪತ್ರವನ್ನು ನೀಡಿದೆ. ಅರ್ಜಿದಾರನಿಂದ ಪ್ರತ್ಯರ್ಜಿದಾರ ಬ್ಯಾಂಕಿಗೆ ಅಡಮಾನ ಮಾಡಲಾದ ಸ್ವತ್ತನ್ನು ಹರಾಜು ಮೂಲಕ ಮಾರಾಟಕ್ಕೆ ತರಲಾಗಿದೆ. ಮಾರಾಟವನ್ನು ನಡೆಸುವಲ್ಲಿ ಬ್ಯಾಂಕು ಎಸ್ಎಆರ್ಎಫ್ಎಇಎಸ್ಐನ ಉಪಬಂಧಗಳ ಮೇಲೆ ಅವಲಂಬಿತವಾಗಿಲ್ಲದಿರುವ ಸಂದರ್ಭದಲ್ಲಿ ಅಥವಾ ಈ ಸಂಬಂಧ, ಅದರಿಂದ ಯಾವುದೇ ನಿಯಮ ಭಂಗವಾಗಿದ್ದ ಸಂದರ್ಭದಲ್ಲಿ ಅರ್ಜಿದಾರನು ಎಸ್ಎಆರ್ಎಫ್ಎಇಎಸ್ಐ ಅಧಿನಿಯಮದಡಿ ಲಭ್ಯವಿರುವ ಪರ್ಯಾಯ ಪರಿಹಾರವನ್ನು ಹೊಂದಿದ್ದಾನೆ. ಹೀಗಾಗಿ, ಪ್ರತ್ಯರ್ಜಿದಾರ ಬ್ಯಾಂಕು ತನ್ನ ಕಾನೂನುಬದ್ಧ ಬಾಕಿಗಳ ವಸೂಲಿಗಾಗಿ ನಡೆಸುತ್ತಿರುವ ಹರಾಜಿನ ಹಂತದಲ್ಲಿ, ಸಾಮಾನ್ಯವಾಗಿ ಈ ನ್ಯಾಯಾಲಯವು ಸದರಿ ಹರಾಜಿನೊಂದಿಗೆ ಹಸ್ತಕ್ಷೇಪ ಮಾಡುವುದಿಲ್ಲ".
>
> "ಸದ್ಯದ ಪ್ರಕರಣದಲ್ಲಿ ರೂ.228.51 ಲಕ್ಷಗಳ ದರದಲ್ಲಿ ಮೊದಲು ನಿಗದಿಪಡಿಸಿದ ಮೀಸಲು ಬೆಲೆಗೆ ಗ್ರಾಹಕರು ಬರಲಿಲ್ಲ ಮತ್ತು ಅದರಂತೆ, ಪ್ರತ್ಯರ್ಜಿದಾರ ಬ್ಯಾಂಕು ರೂ.110ಲಕ್ಷಗಳಿಗೆ ಮೀಸಲು ಬೆಲೆಯನ್ನು ನಿಗದಿಪಡಿಸಿದ್ದು ಅದು ಅಷ್ಟರಿಂದ ಸಾರ್ವಜನಿಕ ಹರಾಜು ಪ್ರಾರಂಭವಾಗುವ ಬೆಲೆಯಾಗಿರುತ್ತದೆ ಮತ್ತು ಕನಿಷ್ಠ

ಮೌಲ್ಯ (ಫ್ಲೋರ್ ವ್ಯಾಲ್ಯೂ) ಅಥವಾ ಮೀಸಲು ಬೆಲೆಗಿಂತ ಕಡಿಮೆಗೆ ಬಿಡ್‌ಗಳನ್ನು ನೀಡಲು ಹರಾಜು ಬಿಡ್ಡುದಾರರಿಗೆ ಅನುಮತಿಸಿಲ್ಲ. ಅರ್ಜಿದಾರನು ಒಬ್ಬ ಗ್ರಾಹಕನಿಗೆ, ಅಥವಾ ಅರ್ಜಿದಾರನೇ ಸ್ವತಃ ಪ್ರಸ್ತಾವಿಸಿದಂಥ ಮೌಲ್ಯಕ್ಕೆ ತನ್ನ ಬಿಡ್ ಅನ್ನು ನೀಡಬಲ್ಲ ಒಬ್ಬ ಬಿಡ್ಡುದಾರನಿಗೆ ಭದ್ರತೆ ನೀಡಲು ಸಮರ್ಥನಾದಲ್ಲಿ, ಸ್ವತ್ತನ್ನು ಹರಾಜು ಮಾಡಲು ಅದರ ಈ ಮೊದಲಿನ ಪ್ರಯತ್ನಗಳು ವ್ಯರ್ಥವಾಗಿರುವ ಕಾರಣದಿಂದ ಸದರಿ ಬಿಡ್ಡನ್ನು ಭದ್ರತೆಯುಳ್ಳ ಸಾಲ ನೀಡುವವನು ಖಂಡಿತಾ ಒಪ್ಪುತ್ತಾನೆಂದು ಹೇಳುವ ಅಗತ್ಯವಿಲ್ಲ."

ಸದ್ಯದ ಪ್ರಕರಣದಲ್ಲಿ, ಈ ಮೇಲೆ ಈಗಾಗಲೇ ಗಮನಿಸಲಾದಂತೆ, ಅರ್ಜಿದಾರನು ಸಾಲಗಾರನಾಗಿದ್ದಾನೆ ಮತ್ತು ಅದು ಬ್ಯಾಂಕಿಗೆ ಬಾಕಿ ಬರಬೇಕಾದ ಹಣದ ಪಾವತಿ ಮಾಡುವಲ್ಲಿ ತಪ್ಪಿತಸ್ಥವಾಗಿದೆ. ಅದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಅರ್ಜಿದಾರನು ಬ್ಯಾಂಕಿಗೆ ಬಾಕಿ ಕೊಡಬೇಕಾದ ಸಾರ್ವಜನಿಕ ಹಣವನ್ನು ಮರುಪಾವತಿಸಿಲ್ಲ. ಅರ್ಜಿದಾರನ ಸಾಲದ ಖಾತೆಯು 'ಪಾಲಿಸದಿರುವ ಸ್ವತ್ತು' ಎಂದು ವರ್ಗೀಕರಣಗೊಂಡಿದ್ದು, ಪ್ರತ್ಯರ್ಜಿದಾರ – ಬ್ಯಾಂಕು ಬಾಕಿಯನ್ನು ವಸೂಲಿ ಮಾಡಲು ಎಸ್‌ಎಆರ್‌ಎಫ್‌ಎಇಎಸ್‌ಐ ಅಡಿಯಲ್ಲಿ ವ್ಯವಹರಣೆಗಳನ್ನು ಪ್ರಾರಂಭಿಸಿದೆ. ಈ ಮೊದಲಿನ ಹರಾಜುಗಳಲ್ಲಿ ಎಂದರೆ, ದಿನಾಂಕ: 15.11.2013ರಂದು ಮತ್ತು ದಿನಾಂಕ: 4.12.2013ರಂದು ನಡೆಯಬೇಕಾಗಿದ್ದಂಥ ಹರಾಜುಗಳಲ್ಲಿ ಮೀಸಲು ಬೆಲೆಯನ್ನು ರೂ.228.51 ಲಕ್ಷಗಳೆಂದು ನಿಗದಿಪಡಿಸಲಾಗಿತ್ತು. ಹಾಗಿದ್ದರೂ, ದಿನಾಂಕ: 31.01.2014ರಂದು ಮಧ್ಯಾಹ್ನ 3.30ಗಂಟೆಗೆ (ಇ–ಹರಾಜು) ನಡೆಸಬೇಕೆಂದು ಪ್ರಸ್ತಾವಿಸಲಾದ ಹರಾಜಿನಲ್ಲಿ, ದಿನಾಂಕ: 30.12.2013ರಂದು ಹೊರಡಿಸಲಾದ ಪತ್ರಿಕಾ ಪ್ರಕಟಣೆ

ಅನುಬಂಧ–ಸಿ ಯಲ್ಲಿ ಮೀಸಲು ಬೆಲೆಯನ್ನು ರೂ.110 ಲಕ್ಷಗಳೆಂದು ನಿಗದಿಪಡಿಸಲಾಗಿದೆ. ಅರ್ಜಿದಾರರ ಕುಂದುಕೊರತೆಯೇನೆಂದರೆ, ಆ ಸ್ವತ್ತಿನ ಮೌಲ್ಯವು ರೂ.405.21 ಲಕ್ಷಗಳಿಗಿಂತಲೂ ಹೆಚ್ಚಾಗಿದೆ ಮತ್ತು ಅದರಂತೆ, ಪ್ರಶ್ನೆಯಲ್ಲಿರುವ ಸ್ವತ್ತನ್ನು ಅತ್ಯಲ್ಪ ಹಣಕ್ಕೆ ಮಾರಲಾಗದು ಎಂಬುದಾಗಿದೆ. ಅರ್ಜಿದಾರರು ವಾದಿಸಿದಂತೆ ಸ್ವತ್ತಿನ ಮೌಲ್ಯವು ರೂ.405.21 ಲಕ್ಷಗಳಾಗಿದ್ದಲ್ಲಿ, ಸದರಿ ಮೌಲ್ಯಕ್ಕೆ ಸ್ವತ್ತಿನ ಖರೀದಿಗೆ ಖರೀದಿದಾರನನ್ನು ಅಥವಾ ಬಿಡ್ಡರ್‌ನನ್ನು ಪಡೆಯುವುದರಿಂದ ಮತ್ತು ಅರ್ಜಿದಾರನ ಪ್ರಕಾರ ದಿನಾಂಕ: 31.01.2014ರಂದು ಇದ್ದಂತೆ, ಸುಮಾರು ರೂ.285.71 ಲಕ್ಷಗಳ (ದಿನಾಂಕ: 11.10.2013ರಂದು ಇದ್ದಂತೆ, ರೂ.261 ಲಕ್ಷಗಳಾಗಿತ್ತು.) ಮೊತ್ತವನ್ನು ಪ್ರತ್ಯರ್ಜಿದಾರರಿಗೆ ತನ್ನಿಂದ ಬಾಕಿ ಇದ್ದ ಸಾಲಗಳನ್ನು ಚುಕ್ತಾಗೊಳಿಸಿಕೊಳ್ಳುವುದರಿಂದ ಯಾವುದೂ ತಡೆಯುತ್ತಿರಲಿಲ್ಲ. ಹಾಗಿದ್ದರೂ, ಸದರಿ ಅವಲಂಬನೆಯನ್ನು ತೆಗೆದುಕೊಳ್ಳದೆ, ಅರ್ಜಿದಾರರು ಹರಾಜು ವ್ಯವಹರಣೆಗಳನ್ನು ನಡೆಸಲು ಪ್ರಯತ್ನಿಸುತ್ತಿದೆ. ಅದು ಅನುಮತೀಯವಾಗಿಲ್ಲ. ಒಂದು ರಾಷ್ಟ್ರೀಕೃತ ಬ್ಯಾಂಕಾದ, ಸಾರ್ವಜನಿಕ ಹಣದ ಕಸ್ಟೋಡಿಯನ್ ಆದ ಪ್ರತ್ಯರ್ಜಿದಾರ ಬ್ಯಾಂಕು ತನ್ನ ಬಾಕಿಗಳನ್ನು ವಸೂಲು ಮಾಡಲು ಇ–ಹರಾಜಿನ ಮುಖಾಂತರ ಸ್ವತ್ತಿನ ಹರಾಜು ಮಾಡುವ ಮೂಲಕ ಕ್ರಮಗಳನ್ನು ಕೈಗೊಳ್ಳುತ್ತಿದೆ ಮತ್ತು ಪ್ರತ್ಯರ್ಜಿದಾರ ಬ್ಯಾಂಕಿನ ಈ ಕ್ರಮವು ದೋಷವಾಗುವುದಿಲ್ಲ. ಪ್ರತ್ಯರ್ಜಿದಾರ ಬ್ಯಾಂಕು ಇನ್ನೂ ಹೆಚ್ಚಿನ ಸಹಭಾಗಿತ್ವವಿರುವ ಪ್ರಕ್ರಿಯೆಯಾದ, "ಸಾರ್ವಜನಿಕ ಹರಾಜು" ಎಂದು ಮೇಲೆ ಉಲ್ಲೇಖಿಸಲಾದ, 'ಯುನೈಟೆಡ್ ಇಂಡಿಯಾ ಅಶುರೆನ್ಸ್ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದಿಂದ ಸೂಚಿಸಲಾದ ಕ್ರಮಗಳಲ್ಲಿ ಒಂದನ್ನು ಅಂಗೀಕರಿಸಿದೆ. ಏನೇ

ಆದರೂ, ಹರಾಜನ್ನು ಯಾವುದೇ ಕಾರಣಕ್ಕಾಗಿ ರದ್ದುಪಡಿಸಬೇಕಿದ್ದಲ್ಲಿ, ಅರ್ಜಿದಾರರು ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದಡಿ ಲಭ್ಯವಿರುವ ಪರಿಹಾರವನ್ನು ಅವಲಂಬಿಸಬಹುದು ಮತ್ತು ಮಾರಾಟವನ್ನು ರದ್ದುಪಡಿಸಬಹುದು. ಹಾಗಿದ್ದರೂ, ಅಜಿದಾರನಿಗೆ ಈ ನ್ಯಾಯಾಲಯದ ಅಸಾಧಾರಣ ಅಧಿಕಾರ ವ್ಯಾಪ್ತಿಯಡಿಯಲ್ಲೇ ಹರಾಜು ನಡೆಸಲು ಅನುಮತಿಸಲಾಗದು".

(ಒತ್ತು ನೀಡಲಾಗಿದೆ)

12. ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರು ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದಲ್ಲಿ ಒಳಗೊಂಡಿರುವಂತೆ ಉಪಬಂಧಗಳನ್ನು, ಹಾಗೆಯೇ ಈ ನ್ಯಾಯಾಲಯದ ನಿರ್ಣಯಗಳನ್ನು, ಅದರಲ್ಲೂ ನಿರ್ದಿಷ್ಟವಾಗಿ **ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ – ವಿರುದ್ಧ – ಸತ್ಯವತಿ ಟಂಡನ್ ಹಾಗೂ ಇತರರು, (2009) 1 ಎಸ್‌**ಸಿಸಿ **168** ಪ್ರಕರಣದಲ್ಲಿನ ನಿರ್ಣಯವನ್ನು ಗಮನದಲ್ಲಿರಿಸಿಕೊಂಡಿರುತ್ತಾರೆ. ಆ ದೃಷ್ಟಿಯಿಂದ, ಮುಂದಿಡಲಾದ ವಾದಗಳನ್ನು ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರು ಅಂಗೀಕರಿಸಿಲ್ಲದಿದ್ದು, ಏನೇ ಆದರೂ ಹರಾಜನ್ನು ಯಾವುದೇ ಕಾರಣಕ್ಕಾಗಿ ರದ್ದುಗೊಳಿಸಿದ್ದೇ ಆದಲ್ಲಿ, ಇದರಲ್ಲಿ ಅರ್ಜಿದಾರನಾದ ದೂರುದಾರನು ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದಡಿ ಪರಿಹಾರವನ್ನು ಅವಲಂಬಿಸಬಹುದು ಮತ್ತು ಮಾರಾಟವನ್ನು ರದ್ದುಪಡಿಸಬಹುದು. ಆ ದೃಷ್ಟಿಯಿಂದ, ರಿಟ್ ಅರ್ಜಿಯಲ್ಲಿ ಮಾಡಲಾದ ಕೋರಿಕೆಯ ಮುಖಾಂತರ ಹರಾಜನ್ನು ನಡೆಸಲು ದೂರುದಾರನಿಗೆ ಅನುಮತಿಸಲಾಗದು ಎಂಬುದು ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರ ಅಭಿಪ್ರಾಯವಾಗಿದೆ. ರಿಟ್ ಅಪೀಲು ಸಂಖ್ಯೆ: 100349/2014ನ್ನು ಹೊಂದಿರುವ ಇಂಟ್ರಾಕೋರ್ಟ್ ಅಪೀಲಿನಲ್ಲಿ ಸದರಿ ಆದೇಶವನ್ನು ದೂರುದಾರನು ಖಂಡಿಸಿರುತ್ತಾನೆ. ವಿಭಾಗೀಯ ಪೀಠವು ತನ್ನ ಆದೇಶದ ದಿನಾಂಕ: 19.08.2014ರಂದು **ಸತ್ಯವತಿ ಟಂಡನ್ ಹಾಗೂ ಇತರರು** (ಮೇಲೆ ಹೇಳಿದ)

ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರು ಮಾಡಿದ ಪರಿಶೀಲನೆಯನ್ನು ಗಮನಿಸಿರುತ್ತದೆ ಮತ್ತು ತದನುಸಾರವಾಗಿ, ರಿಟ್ ಅಪೀಲನ್ನು ವಜಾ ಮಾಡಿರುತ್ತದೆ.

13. ಸದರಿ ರಿಟ್ ವ್ಯವಹರಣೆಗಳಲ್ಲಿ ಉಚ್ಚ ನ್ಯಾಯಾಲಯದಿಂದ ಮಾಡಲಾದ ಪರಿಶೀಲನೆಯನ್ನು ಗಮನದಲ್ಲಿಟ್ಟುಕೊಂಡಿದ್ದು ಮತ್ತು ಕೈಯಲ್ಲಿರುವ ವ್ಯವಹರಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಈಗಿನ ಸ್ವರೂಪದ ವಿಷಯದಲ್ಲಿ, ಅಪೀಲುದಾರರು ಕ್ರಿಮಿನಲ್ ವ್ಯವಹರಣೆಗಳ ಪ್ರಕ್ರಿಯೆಗೆ ಒಳಪಡುವ ಕಳಂಕಕ್ಕೆ ತೆರೆದುಕೊಳ್ಳತಕ್ಕದ್ದೆ? ಎಂಬ ಬಗ್ಗೆ ತೀರ್ಮಾನಕ್ಕೆ ಬರುವ ಸಲುವಾಗಿ, ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದಲ್ಲಿ ಒಳಗೊಂಡಿರುವಂತೆ ಉಪಬಂಧಗಳನ್ನು ಗಮನಿಸುವುದು ಸೂಕ್ತವಾಗಿದೆ. ವಿವಾದಾಂಶವು ಅಧಿನಿಯಮದಡಿ ಪರಿಭಾಷಿಸಲಾದಂತೆ ಭದ್ರತೆಯುಳ್ಳ ಆಸ್ತಿಗೆ ಸಂಬಂಧಪಡುವ ಪರಿಹಾರದ ಚಲಾವಣೆಗೆ ಸಂಬಂಧಿಸುತ್ತದೆ ಎಂಬ ಸಂಗತಿಯು ವಿವಾದದಲ್ಲಿರಲು ಸಾಧ್ಯವಿಲ್ಲ. ದೂರುದಾರನ ಖಾತೆಯನ್ನು ಎನ್‌ಪಿಎ ಎಂದು ವರ್ಗೀಕರಿಸಲಾಗಿತ್ತೆಂಬುದು ಸಹ ಒಪ್ಪಿತ ಸ್ಥಿತಿಯಾಗಿದೆ. ಆ ಸಂಬಂಧ, ಭದ್ರತೆಯ ಹಿತಾಸಕ್ತಿಯನ್ನು ಜಾರಿಗೊಳಿಸಲು ಭದ್ರತೆಯುಳ್ಳ ಸಾಲ ನೀಡುವವನಿಗೆ ಹಕ್ಕು ಪ್ರಾಪ್ತವಾದಾಗ, ಎಸ್‌ಎಆರ್‌ಎಫ್‌ಎಇಎಸ್ ಅಧಿನಿಯದ 13 ಮತ್ತು 14ನೇ ಪ್ರಕರಣಗಳಡಿ ಉದ್ದೇಶಿಸಲಾದಂತೆ ಕಾರ್ಯವಿಧಾನವನ್ನು ಅವಲಂಬಿಸಬೇಕಿರುತ್ತದೆ. ಅಷ್ಟೇ ಅಲ್ಲದೆ. ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ಭದ್ರತೆಯುಳ್ಳ ಆಸ್ತಿಯ ಮೌಲ್ಯಮಾಪನ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಅಂಗೀಕರಿಸಬೇಕಾದ ಕಾರ್ಯವಿಧಾನವನ್ನು ಉಪಬಂಧಿಸುತ್ತದೆ. ದೂರುದಾರನು, ಒಬ್ಬ ಸಾಲಗಾರನಾಗಿ, ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದ 13ನೇ ಪ್ರಕರಣದ ಉಪಬಂಧಗಳನ್ನು ಅನ್ವಯಿಸಿ ಭದ್ರತೆಯುಳ್ಳ ಸಾಲನೀಡುವವನಿಂದ ಕೈಗೊಳ್ಳಲಾದ ಯಾವುವೇ ಕ್ರಮಗಳಿಗೆ ಸಂಬಂಧಿಸಿ ಯಾವುದೇ ಕುಂದುಕೊರತೆಯನ್ನು ಹೊಂದಿದ್ದಲ್ಲಿ, ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದ 17ನೇ ಪ್ರಕರಣದಡಿ ಉಪಬಂಧಿಸಲಾದಂತೆ ಪರಿಹಾರವನ್ನು ಲಭ್ಯಗೊಳಿಸಿರಬೇಕಿತ್ತು. ಆ ಹಿನ್ನೆಲೆಯಲ್ಲಿ, ಉಚ್ಚ ನ್ಯಾಯಾಲಯವು ರಿಟ್ ವ್ಯವಹರಣೆಗಳಲ್ಲಿ ಅಂಥ ತೀರ್ಮಾನಕ್ಕೆ ಬಂದಿರುತ್ತದೆ.

ಆ ಸಂದರ್ಭದಲ್ಲಿ, ಐ.ಆರ್.ಸಂಖ್ಯೆ: 3044/2014ರಲ್ಲಿ 17ನೇ ಪ್ರಕರಣದಡಿ ಅರ್ಜಿಯನ್ನು ಸಲ್ಲಿಸುವ ಮೂಲಕ ಅಧಿನಿಯಮದಡಿ ದೂರುದಾರನು ಪರಿಹಾರವನ್ನು ಪಡೆದಿರುತ್ತಾನೆ. ಅದನ್ನು ಸಲ್ಲಿಸುವಲ್ಲಿ ವಿಳಂಬವಾದ ಕಾರಣ, ವಿಳಂಬವನ್ನು ಮನ್ನಾ ಮಾಡಲು ಕೋರಿ, ಕಾಲ ಪರಿಮಿತಿ ಅಧಿನಿಯಮದ 5ನೇ ಪ್ರಕರಣದಡಿ ಐ.ಎ.ಸಂಖ್ಯೆ: 4482/2015ರಲ್ಲಿ ಅರ್ಜಿಯನ್ನು ಸಲ್ಲಿಸಲಾಯಿತು. ವಿಳಂಬದ ಕಾರಣಕ್ಕಾಗಿ ಅದನ್ನು ತಿರಸ್ಕರಿಸಲಾಗಿದ್ದು, ಅದರ ವಿರುದ್ಧ ಒಂದು ಅಪೀಲನ್ನು ಡಿಆರ್‌ಎಟಿ ಮುಂದೆ ಸಲ್ಲಿಸಿರುವುದಾಗಿ ಹೇಳಲಾಗಿರುತ್ತದೆ ಮತ್ತು ಅದು ಈಗ ವಜಾಗೊಳ್ಳುವುದಕ್ಕಾಗಿ ಹೇಳಿದ್ದರೂ, ಇತ್ಯರ್ಥದಲ್ಲಿತ್ತು. ಆ ಹಂತದಲ್ಲಿ, ಅದು ಇನ್ನೂ ಇತ್ಯರ್ಥದಲ್ಲಿದ್ದಾಗ, ಪಿ.ಸಿ. ಸಂಖ್ಯೆ: 389/2016ರಲ್ಲಿ ಪ್ರಶ್ನಿತ ದೂರನ್ನು ದಾಖಲಿಸಲಾಯಿತು. ಅದರಲ್ಲಿ ಆದೇಶ ದಿನಾಂಕ: 20.5.2016ರ ಮುಖಾಂತರ ಸಿಆರ್‌ಪಿಸಿ 156(3)ನೇ ಪ್ರಕರಣದಡಿ ತನಿಖೆಗೆ ಕಳುಹಿಸಲಾಯಿತು.

14. ದೂರುದಾರನ ಪರ ಮಾನ್ಯ ಹಿರಿಯ ವಕೀಲರು, 1 ಮತ್ತು 12ನೇ ಆಪಾದಿತರಿಂದ ಸಲ್ಲಿಸಲಾದ ಕ್ರಿಮಿನಲ್ ಅರ್ಜಿ ಸಂಖ್ಯೆ: 101162/2016 ಮತ್ತು ಕ್ರಿಮಿನಲ್ ಅರ್ಜಿ ಸಂಖ್ಯೆ:101258/2016 ಉಚ್ಚ ನ್ಯಾಯಾಲಯದಿಂದ ವಜಾಗೊಂಡ ಬಗ್ಗೆ ಮತ್ತು ಅದನ್ನು ಮುಂದುವರೆಸದಿರುವ ಬಗ್ಗೆ ಹಾಗೂ ಅದು ಅಂತಿಮತೆಯನ್ನು ಪಡೆಯುವ ಬಗ್ಗೆ ಗಮನ ಸೆಳೆದಿದ್ದಾರೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಪರಿಸ್ಥಿತಿ ಹಾಗಿದ್ದರೂ, ಸದ್ಯದ ಪ್ರಕರಣದಲ್ಲಿ, ಅಪೀಲುದಾರರು ಲಭ್ಯವಿರುವ ಪರಿಹಾರವನ್ನು ಪಡೆಯಲು ಈ ನ್ಯಾಯಾಲಯದ ಮೊರೆ ಹೋಗಿದ್ದಾರೆ ಮತ್ತು ಅದರಂತೆ, ಸದರಿ ಅರ್ಜಿಗಳ ವಜಾವಣೆಯು, ಹಿಂದಿನ ಪ್ರಕರಣಗಳಲ್ಲಿ ವಿಷಯವು ಲಭ್ಯವಿರದಿದ್ದರೂ, ಈ ನ್ಯಾಯಾಲಯವು ಅದರನ್ನು ಗಮನಿಸುವ ಅಗತ್ಯತೆಯಿದ್ದಾಗ ಅವರು ತಮ್ಮ ವಾದವನ್ನು ಪೂರ್ವಾಗ್ರಹಗೊಳಿಸಲಾಗದು. ಅಷ್ಟೇ ಅಲ್ಲದೆ, ಮಾನ್ಯ ಹಿರಿಯ ವಕೀಲರು ಕೆನರಾ ಬ್ಯಾಂಕಿನ ಇಬ್ಬರು ಮಾಜಿ ಅಧಿಕಾರಿಗಳನ್ನು ಎಂದರೆ, ಗುರುಪಾದಯ್ಯ ಮತ್ತು ಬಾಪುರವರ ಹೇಳಿಕೆಗಳನ್ನು ಸಹ ಉಲ್ಲೇಖಿಸಿದ್ದು, ಅದನ್ನು ತನಿಖೆಯ ಅವಧಿಯಲ್ಲಿ ದಾಖಲಿಸಿಕೊಳ್ಳಲಾಯಿತು ಮತ್ತು ಮಾನ್ಯ ಹಿರಿಯ ವಕೀಲರು ತನಿಖೆಗೆ ಸಂಬಂಧಿಸಿದ ವಿಸ್ತೃತ

ವರದಿಯತ್ತ ಗಮನ ಸೆಳೆದಿದ್ದು, ಅದರಲ್ಲಿ ತನಿಖಾಧಿಕಾರಿ ಎಂದರೆ, ಅಸಿಸ್ಟೆಂಟ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಉಪನಗರ ಪೊಲೀಸ್ ಠಾಣೆ, ಹುಬ್ಬಳ್ಳಿ – ಇವರು ತನಿಖೆಯ ಪ್ರಕಾರ ಎಲ್ಲಾ ಆಪಾದಿತ ವ್ಯಕ್ತಿಗಳು ಪಿತೂರಿಯಿಂದ ಮತ್ತು ಪರಸ್ಪರ ಶಾಮೀಲಾಗಿ, ಮಂಜೂರಾದ ರೂ.2.68 ಕೋಟಿಗಳ ಮೊತ್ತದ ಪೈಕಿ ರೂ.90 ಲಕ್ಷಗಳನ್ನು ಮಾತ್ರ ಬಿಡುಗಡೆ ಮಾಡುವ ಮೂಲಕ ದೂರುದಾರನಿಗೆ ಮೋಸ ಮಾಡಿದ್ದಾರೆ ಮತ್ತು ತರುವಾಯದಲ್ಲಿ ಉಳಿದ ಮೊತ್ತವನ್ನು ಬಿಡುಗಡೆಗೊಳಿಸಿದ್ದು ಅದು ಆರ್ಥಿಕ ಮುಗ್ಗಟ್ಟನ್ನು ಉಂಟು ಮಾಡಿರುತ್ತದೆ ಹಾಗೂ ಅಡಮಾನ ಮಾಡಿದ್ದ ಸ್ವತ್ತನ್ನು ಆಪಾದಿತರಲ್ಲಿ ಒಬ್ಬರಿಗೆ ಮಾರಲಾಗಿರುತ್ತದೆ ಎಂದು ತೀರ್ಮಾನಿಸಿರುತ್ತಾರೆ.

15. ಹಾಗಿದ್ದರೂ, ಸದ್ಯದ ಸಂಗತಿಗಳು ಮತ್ತು ಸನ್ನಿವೇಶಗಳಲ್ಲಿ ಪೊಲೀಸರಿಂದ ಅಂಥ ವ್ಯವಹರಣೆಗಳನ್ನು ಅನುಮತಿಸಬಹುದೆ? ಎಂಬುದು ವಿವಾದಾಂಶವಾಗಿದೆ. ಮೇಲ್ನೋಟಕ್ಕೆ ಸಾಲದ ಮಂಜೂರಾತಿ, ಅಡಮಾನ ಸೃಷ್ಟಿ ಮತ್ತು ಮಂಜೂರಾದ ಸಾಲವನ್ನು ಬಿಡುಗಡೆ ಮಾಡಬೇಕಾದ ವಿಧಾನ ಇವೆಲ್ಲವೂ ಪಕ್ಷಕಾರರ ನಡುವಿನ ಕರಾರಿನ ವಿಷಯಗಳಾಗಿವೆ. ದೂರುದಾರನು ಒಬ್ಬ ಉದ್ಯಮಿಯಾಗಿದ್ದು, ತನ್ನ ಕಂಪನಿಯ ಹೆಸರಿನಲ್ಲಿ ಸಾಲವನ್ನು ಪಡೆದಿರುತ್ತಾನೆ ಮತ್ತು ಆ ಸಂಬಂಧ ಕೆನರಾಬ್ಯಾಂಕು ಸಾಲದ ಲೆಕ್ಕವನ್ನು ನಿರ್ವಹಿಸಿರುತ್ತದೆ. ಅಂಗೀಕರಿಸಲಾದಂತೆ, ಸಾಲವು 16.3.2009ರಂದು ಮಂಜೂರಾಗಿರುತ್ತದೆ. ಆ ಹಂತದಲ್ಲಿ ಹಣ ಬಿಡುಗಡೆಯಾಗಿದ್ದಾಗ ಮತ್ತು ಯಾವುದೇ ಹಣವನ್ನು ಹಿಡಿದುಕೊಂಡಿದ್ದಲ್ಲಿ, ದೂರುದಾರರು ಆ ಅವಧಿಯಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳುವ ಮತ್ತು ತನ್ನ ಪರಿಹಾರವನ್ನು ಪಡೆಯುವ ಅಗತ್ಯವಿರುತ್ತದೆ. ಇನ್ನೊಂದು ಕಡೆಯಲ್ಲಿ, ದೂರುದಾರನು ವ್ಯವಹಾರದೊಂದಿಗೆ ಮುಂದುವರೆದಿದ್ದು, 15.1.2013ರಂದು ಲೆಕ್ಕವು ಎನ್‌ಪಿಎ ಆಗಿ ವರ್ಗೀಕರಣಗೊಳ್ಳುವವರೆಗೂ ಸಾಲದ ಲೆಕ್ಕವನ್ನು ನಿರ್ವಹಿಸಿರುತ್ತಾನೆ. ಮೂಲತಃ ಸ್ವತ್ತನ್ನು ಮಾರಾಟಕ್ಕೆ ತಂದಾಗ ಸ್ವತ್ತಿನ ಕಡಿಮೆ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಮಾತ್ರ ವಿವಾದ ಉಂಟಾಗಿತ್ತು. ಆ ದೃಷ್ಟಿಯಿಂದ ಗಮನಿಸಲಾದಂತೆ ರಿಟ್ ವ್ಯವಹರಣೆಗಳನ್ನು ದಾಖಲಿಸಲಾಗಿತ್ತು ಮತ್ತು ಏಕ ಸದಸ್ಯಪೀಠದ ನ್ಯಾಯಾಧೀಶರು ಪರಿಶೀಲನೆ ಮಾಡಿ,

ಗುಣಾರ್ಹತೆಯನ್ನು ಕಾಣದಿದ್ದರೂ. ಅದನ್ನು ಡಿಆರ್‌ಟಿ ಮುಂದೆ ಮಂಡಿಸುವ ಸ್ವಾತಂತ್ರ್ಯವನ್ನು ಮೀಸಲಿರಿಸಿದರು. ಆ ಆಯ್ಕೆಯನ್ನು ಸಹ ಪಡೆದರು. ಆ ನಂತರ ಮಾತ್ರವೇ ದಿನಾಂಕ: 20.05.2016ರಂದು ಪ್ರಶ್ನಿತ ದೂರನ್ನು ಸಲ್ಲಿಸಲಾಯಿತು.

16. ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮವು ತನ್ನಷ್ಟಕ್ಕೆ ಒಂದು ಸಂಪೂರ್ಣ ಸಂಹಿತೆಯಾಗಿದ್ದು, ಭದ್ರತೆಯುಳ್ಳ ಸಾಲ ನೀಡುವವನು ಅನುಸರಿಸಬೇಕಾದ ಕಾರ್ಯವಿಧಾನವನ್ನು ಹಾಗೂ ಸಾಲಗಾರನೂ ಸೇರಿದಂತೆ ಬಾಧಿತ ಪಕ್ಷಕಾರರಿಗೆ ಪರಿಹಾರವನ್ನು ಉಪಬಂಧಿಸುತ್ತದೆ. ಅಂಥ ಸನ್ನಿವೇಶದಲ್ಲಿ ರಿಟ್ ವ್ಯವಹರಣೆಗಳಲ್ಲಿ ಈಗಾಗಲೇ ಉಚ್ಚ ನ್ಯಾಯಾಲಯದಿಂದ ಗಮನಿಸಲಾದಂತೆ, ಅಪೀಲುದಾರರ ಲೆಕ್ಕವನ್ನು ಎನ್‌ಪಿಎ ಎಂದು ವರ್ಗೀಕರಿಸುವ ರೀತಿಯಲ್ಲಿ ಅಥವಾ ಸ್ವತ್ತನ್ನು ಮೌಲ್ಯಮಾಪನ ಮಾಡಿದ ಅಥವಾ ಹರಾಜು ಮಾಡಿದ ರೀತಿಯಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ, ಭದ್ರತೆಯುಳ್ಳ ಸಾಲನೀಡುವವನು. ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದ 13ನೇ ಪ್ರಕರಣದಡಿ ಅಧಿಕಾರವನ್ನು ಕೋರಿದ ನಂತರದ ಹಂತದಲ್ಲಿ ಅಂಥ ಹರಾಜನ್ನು ರದ್ದುಪಡಿಸುವ ಅಧಿಕಾರದೊಂದಿಗೆ ಡಿಆರ್‌ಟಿ ನಿಹಿತವಾಗಿದೆ. ಈ ಅಭಿಪ್ರಾಯವು **ಆಥರೈಸ್ಡ್ ಆಫೀಸರ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಹಾಗೂ ಇನ್ನೊಬ್ಬರು – ವಿರುದ್ಧ – ಅಶೋಕ್ ಸಾ ಮಿಲ್ (2009) 8 ಎಸ್‌ಸಿಸಿ 366ರ** ಪ್ರಕರಣದಲ್ಲಿ ಈ ನ್ಯಾಯಾಲಯದ ನಿರ್ಣಯದಿಂದ ದೃಢಪಟ್ಟಿದ್ದು, ಅದನ್ನು ಈ ಕೆಳಗಿನಂತೆ ತೀರ್ಮಾನಿಸಲಾಗಿದೆ:

> "34. 13ನೇ ಪ್ರಕರಣದ 4ನೇ ಉಪ–ಪ್ರಕರಣದ (ಬಿ) ಖಂಡದ ಎರಡು ಪರಂತುಕಗಳಲ್ಲಿ ಸೂಚಿಸಿದ ಷರತ್ತುಗಳಿಗೊಳಪಟ್ಟು, ಭದ್ರತೆಯುಳ್ಳ ಆಸ್ತಿಗಳನ್ನು ವಸೂಲಿ ಮಾಡುವುದಕ್ಕಾಗಿ ಗುತ್ತಿಗೆ, ಹಸ್ತಾಂತರಣ ಅಥವಾ ಮಾರಾಟದ ಮೂಲಕ ವರ್ಗಾವಣೆಯ ಹಕ್ಕನ್ನು ಒಳಗೊಂಡಂತೆ, ಸಾಲಗಾರನ ಭದ್ರತೆಯುಳ್ಳ ಆಸ್ತಿಗಳ ಸ್ವಾಧೀನವನ್ನು ತೆಗೆದುಕೊಳ್ಳುವುದಷ್ಟೇ ಅಲ್ಲದೆ ಸಾಲಗಾರನ ವ್ಯವಹಾರದ ನಿರ್ವಹಣೆಯನ್ನು ಕೈಗೊಳ್ಳಲು

ಸಹ, ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳಂಥ ಭದ್ರತೆಯುಳ್ಳ ಸಾಲ ನೀಡುವವರನ್ನು, 13ನೇ ಪ್ರಕರಣದ ಉಪಬಂಧಗಳು ಶಕ್ತಗೊಳಿಸುತ್ತವೆ.

35. ಅಂಥ ವಿಸ್ತೃತ ಅಧಿಕಾರಗಳ ದುರುಪಯೋಗವನ್ನು ತಪ್ಪಿಸುವ ಸಲುವಾಗಿ ಮತ್ತು ಬ್ಯಾಂಕ್‌ಗಳ ಅಥವಾ ಹಣಕಾಸು ಸಂಸ್ಥೆಗಳ ಕಡೆಯಿಂದ ತಪ್ಪಾಗುವ ಕಾರಣದಿಂದ ಸಾಲಗಾರನಿಗೆ ಉಂಟಾಗುವ ಪೂರ್ವಾಗ್ರಹವನ್ನು ತಪ್ಪಿಸಲು, ಕೆಲವು ತನಿಖೆಗಳು ಮತ್ತು ಬಾಕಿಗಳನ್ನು 17ನೇ ಪ್ರಕರಣಗಳಲ್ಲಿ ಪರಿಚಯಿಸಲಾಗಿದ್ದು, ಅವು ಅದರ (3)ನೇ ಉಪ-ಪ್ರಕರಣದಲ್ಲಿ ಸೂಚಿಸಿದ ಪರಿಹಾರಕ್ಕಾಗಿ ಕೈಗೊಂಡಿರುವ ಅಂಥ ಕ್ರಮಗಳ ದಿನಾಂಕದ 45ದಿನಗಳೊಳಗಾಗಿ ಆ ವಿಷಯದಲ್ಲಿ ಅಧಿಕಾರ ವ್ಯಾಪ್ತಿ ಹೊಂದಿರುವ ಡಿಆರ್‌ಟಿಗೆ ಅರ್ಜಿ ಸಲ್ಲಿಸಲು ಭದ್ರತೆಯುಳ್ಳ ಸಾಲ ನೀಡುವವನಿಂದ ತೆಗೆದುಕೊಳ್ಳಲಾದ, 13ನೇ ಪ್ರಕರಣದ (4)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುವೇ ಕ್ರಮಗಳಿಂದ ಬಾಧಿತನಾದ ಸಾಲಗಾರನೂ ಸೇರಿದಂತೆ ಯಾರೇ ವ್ಯಕ್ತಿಯನ್ನು ಅನುಮತಿಸುತ್ತದೆ.

36. ಆದುದರಿಂದ, ವಿಧಾನಮಂಡಲದ ಉದ್ದೇಶವೇನೆಂದರೆ, ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು ತಮ್ಮ ಬಾಕಿಗಳ ವಸೂಲಿಗಾಗಿ ಕಟ್ಟುನಿಟ್ಟದ ಅಧಿಕಾರಗಳೊಂದಿಗೆ ನಿಹಿತವಾಗಿದ್ದು, ಅಂಥ ಯಾವುದೇ ಕ್ರಮವನ್ನು ಅಸಿಂಧುವೆಂದು ಘೋಷಿಸಲು ಆ ವಿಷಯವನ್ನು ನ್ಯಾಯ ನಿರ್ಣಯ ಮಾಡಿದ ನಂತರ ಅಧಿಕಾರದೊಂದಿಗೆ ಡಿಆರ್‌ಟಿಯನ್ನು ನಿಹಿತಗೊಳಿಸುವ ಮೂಲಕ ಯಾವುದೇ ತಪ್ಪನ್ನು ಅಥವಾ ಅಂಥ ಅಧಿಕಾರಗಳ ದುರುಪಯೋಗವನ್ನು ಸರಿಪಡಿಸುವುದಕ್ಕಾಗಿ ರಕ್ಷಣಾ ಕ್ರಮಗಳನ್ನು ಒದಗಿಸುತ್ತದೆಯೆಂಬುದನ್ನು ಮತ್ತು ಸ್ವಾಧೀನವನ್ನು ವರ್ಗಾವಣೆ ಪಡೆದವನಿಗೆ ಮಾಡಿದ್ದಿರಬಹುದಾದರೂ ಸಹ ಸ್ವಾಧೀನವನ್ನು ಪುನಃಸ್ಥಾಪಿಸುವುದನ್ನು ಸಹ ಸ್ಪಷ್ಟಪಡಿಸುತ್ತದೆ.

37. 17ನೇ ಪ್ರಕರಣದ (3)ನೇ ಉಪ–ಪ್ರಕರಣದಡಿ ಡಿಆರ್‌ಟಿಯಲ್ಲಿ ನಿಹಿತವಾದ ಅಧಿಕಾರದ ತತ್ಪರಿಣಾಮಗಳು, ಭದ್ರತೆಯುಳ್ಳ ಸಾಲ ನೀಡುವವನಿಂದ ಕೈಗೊಳ್ಳಲಾದ ಕ್ರಮವನ್ನು ಮತ್ತು ಅಧಿನಿಯಮದ 13(4)ನೇ ಪ್ರಕರಣದ ಕಾರಣದಿಂದಾಗಿ ಒಪ್ಪಂದ ಮಾಡಿಕೊಳ್ಳಲಾದ ವ್ಯವಹಾರಗಳನ್ನು ಪ್ರಶ್ನಿಸಲು ಡಿಆರ್‌ಟಿಯು ಹಕ್ಕುಳ್ಳದ್ದಾಗಿದೆ ಎಂಬುದನ್ನು ಅತ್ಯಗತ್ಯವಾಗಿ ಒಳಗೊಳ್ಳುತ್ತದೆ. ವಿಧಾನಮಂಡಲವು 17ನೇ ಪ್ರಕರಣದಲ್ಲಿ 13ನೇ ಉಪಪ್ರಕರಣವನ್ನೊಳಗೊಂಡಂತೆ ಮಾರಾಟವೂ ಸೇರಿದಂತೆ ವ್ಯವಹಾರವನ್ನು ರದ್ದುಪಡಿಸಲೂ ಮತ್ತು ಸೂಕ್ತ ಪ್ರಕರಣಗಳಲ್ಲಿ ಸಾಲಗಾರನಿಗೆ ಸ್ವಾಧೀನವನ್ನು ಪುನಃಸ್ಥಾಪಿಸಲೂ ಸಹ ಅಧಿಕಾರದೊಂದಿಗೆ ಡಿಆರ್‌ಟಿಯನ್ನು ನಿಹಿತಗೊಳಿಸುವ ಮಟ್ಟಕ್ಕೆ ಹೋಗಿದೆ. ಫಲಿತಾಂಶವಾಗಿ, 13(4)ನೇ ಪ್ರಕರಣಾ ನಂತರದ ಸನ್ನಿವೇಶದೊಂದಿಗೆ ವ್ಯವಹರಿಸುವ ಅಧಿಕಾರವ್ಯಾಪ್ತಿಯನ್ನು ಡಿಆರ್‌ಟಿ ಹೊಂದಿಲ್ಲವೆಂಬ ಶ್ರೀ ಗೋಪಾಲನ್ ಮತ್ತು ಶ್ರೀ ಅಲ್ತಫ್ ಅಹಮದ್‌ರವರಿಂದ ಮಂಡಿಸಲಾದ ವಾದಗಳನ್ನು ಅಂಗೀಕರಿಸಲಾಗದು.

(ಒತ್ತು ನೀಡಲಾಗಿದೆ)

17. ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದಡಿ ಬ್ಯಾಂಕ್‌ಗಳಿಂದ ಕೈಗೊಳ್ಳಲಾದ ಕ್ರಮವು ಪ್ರಶ್ನಾರ್ಹವಲ್ಲದ್ದೂ ಅಲ್ಲ ಅಥವಾ ಎಲ್ಲಾ ಸನ್ನಿವೇಶಗಳಲ್ಲಿ ಬದಲಾಯಿಸಿಕೂಡದ್ದೂ ಅಲ್ಲ. ಆದರೆ, ಬ್ಯಾಂಕು ಮುಂದುವರೆದ ರೀತಿಯಲ್ಲಿ ವ್ಯತ್ಯಾಸವಿದ್ದಲ್ಲಿ, ಒದಗಿಸಲಾದ ವೇದಿಕೆಯಲ್ಲಿ ಅದನ್ನು ಖಂಡಿಸಲು ಯಾವಾಗಲೂ ಅವಕಾಶವಿರುತ್ತದೆ. ಸದ್ಯದ ಪ್ರಕರಣದಲ್ಲಿ ಡಿಆರ್‌ಟಿ ಮುಂದೆ ದೂರುದಾರನು ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಲಾಗಿದೆ ಮತ್ತು ಡಿಆರ್‌ಎಟಿ ಮುಂದೆ ಸಲ್ಲಿಸಲಾದ ಅಪೀಲು ಸಂಖ್ಯೆ: 523/2015ನ್ನು ಸಹ ವಜಾಗೊಳಿಸಬೇಕೆಂದು ಹೇಳಲಾಗಿದ್ದು, ಅಪೀಲುದಾರರು ಕಾರ್ಯತತ್ಪರವಾಗಿ ಪರಿಹಾರವನ್ನು ಪಡೆಯಲೇಬೇಕಿರುತ್ತದೆ. ಆ ನಿಟ್ಟಿನಲ್ಲಿ, ಡಿಆರ್‌ಟಿ ಮತ್ತು ಡಿಆರ್‌ಎಟಿ ಆದೇಶವನ್ನು

ಖಂಡಿಸಲು ಉಚ್ಚ ನ್ಯಾಯಾಲಯದ ಮೊರೆ ಹೋಗುವ ಮುಂದಿನ ಪರಿಹಾರವೂ ಸಹ ಸೂಕ್ತ ಪ್ರಕರಣಗಳಲ್ಲಿ ಲಭ್ಯವಿದೆ. ಬದಲಾಗಿ ಅರ್ಜಿದಾರನು ಡಿಆರ್‌ಟಿ ಮುಂದೆ ಅರ್ಜಿಯ ವಜಾವಣೆಯ ನಂತರ ಪ್ರಶ್ನಿತ ದೂರನ್ನು ದಾಖಲಿಸಿದ್ದು, ಅದು ಬೆದರಿಕೆ ಹುಟ್ಟಿಸುವ ತಂತ್ರವಾಗಿ ಕಂಡುಬಂದಿರುತ್ತದೆ ಹಾಗೂ ಅದು ನಂತರದಲ್ಲಿ ಕಾನೂನು ಪ್ರಕ್ರಿಯೆಯ ದುರುಪಯೋಗವಾಗಿದೆ. ಈಗಿನ ಸ್ವರೂಪದ ವಿಷಯದಲ್ಲಿ, ಮಂಡಿಸಲಾದಂತೆ ಕುಂದುಕೊರತೆಯನ್ನು ಗಮನಕ್ಕೆ ತೆಗೆದುಕೊಂಡಲ್ಲಿ ಮತ್ತು ಈ ಸಂದರ್ಭದಲ್ಲಿ ದಾಖಲಾದ ದೂರಿನ ಮುಖಾಂತರ ಅದನ್ನು ಚರ್ಚಿಸಲು ಅನುಮತಿಸಿದಲ್ಲಿ ಮತ್ತು ತನಿಖೆಯು ಮುಂದುವರೆಯಲು ಅನುಮತಿಸಿದಲ್ಲಿ ಅದು ಪ್ರಕ್ರಿಯೆಯನ್ನು ಪುನಃ ನಡೆಸಲು ಅಧಿಕಾರ ವ್ಯಾಪ್ತಿಯ ಪೊಲೀಸರನ್ನು ಅನುಮತಿಸುವುದಕ್ಕೆ ಸಮಾನವಾಗಿದ್ದು, ಉಚ್ಚ ನ್ಯಾಯಾಲಯವು ರಿಟ್ ವ್ಯವಹರಣೆಗಳಲ್ಲಿ ಮಾನ್ಯ ಏಕಸದಸ್ಯಪೀಠದ ನ್ಯಾಯಾಧೀಶರಿಂದ ಮತ್ತು ವಿಭಾಗೀಯ ಪೀಠದಿಂದ ಹೊರಡಿಸಲಾದ ಆದೇಶವನ್ನು ಹಾಗೂ ಅಪೇಕ್ಷಣೀಯವೂ ಅಲ್ಲದ ಅಥವಾ ಅನುಮತೀಯವೂ ಅಲ್ಲದ ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದಡಿ ಸಕ್ಷಮ ನ್ಯಾಯಾಲಯದಿಂದ ಹೊರಡಿಸಲಾದ ಆದೇಶಗಳನ್ನು ಪರಿಶೀಲಿಸುವ ಸ್ವರೂಪದಲ್ಲಿರುತ್ತದೆ ಮತ್ತು ಅಂಥ ಬೆದರಿಕೆಯಿಂದ ಹಣ ಬಿಡುಗಡೆ ಮಾಡಲು ಬ್ಯಾಂಕಿಂಗ್ ವ್ಯವಸ್ಥೆಯನ್ನು ಅನುಮತಿಸಲಾಗದು. ಆದುದರಿಂದ, ಸದ್ಯದ ಪ್ರಕರಣವು ಯೋಗ್ಯ ಪ್ರಕರಣವಾಗಿದ್ದು ಅದರಲ್ಲಿ ಅನ್ವಯಿಸಲು ಮತ್ತು ಚಲಾಯಿಸಲು ಅಸಾಧಾರಣ ಅಧಿಕಾರದ ಅಗತ್ಯತೆಯಿದೆ.

18. ಇದರಲ್ಲಿನ ಅಪೀಲುದಾರರು ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದ 32ನೇ ಪ್ರಕರಣದಲ್ಲಿ ಒಳಗೊಳ್ಳಲಾದಂತೆ ಉಪಬಂಧವನ್ನು ಉಲ್ಲೇಖಿಸಿದ್ದು, ಅದು ಸದ್ಭಾವನೆಯಲ್ಲಿ ಕೈಗೊಳ್ಳಲಾದ ಕ್ರಮಕ್ಕಾಗಿ ಅದರಡಿ ಸಂರಕ್ಷಣೆಯನ್ನು ಒದಗಿಸಿದ ಕಾರಣದಿಂದಾಗಿ ಪ್ರಾಸಿಕ್ಯೂಷನ್‌ನಿಂದ ವಿಶೇಷ ವಿನಾಯಿತಿಗಾಗಿ ಉಪಬಂಧಿಸುತ್ತದೆ. ದೂರುದಾರನ ಪರ ಮಾನ್ಯ ಹಿರಿಯ ವಕೀಲರು, ಆ ಸಂಬಂಧದಲ್ಲಿ ಸದ್ಭಾವನೆಗೆ ಸಂಬಂಧಿಸಿದ ಪ್ರತಿವಾದ ಮತ್ತು ಸಾರ್ವಜನಿಕ ಹಿತದೃಷ್ಟಿ ಇವು ವಾಸ್ತವಿಕ ಪ್ರಶ್ನೆಗಳಾಗಿವೆ ಹಾಗೂ ಸಾಕ್ಷ್ಯವನ್ನು ಮುಂದಿಡುವ ಮೂಲಕ ಅವುಗಳನ್ನು ಸಾಬೀತುಪಡಿಸುವ ಅಗತ್ಯವಿದೆಯೆಂದು

ವಾದಿಸಲು **(2012) 6 ಎಸ್‌ಸಿಸಿ 228**ರಲ್ಲಿ ವರದಿಯಾದ **ಜನರಲ್ ಆಫೀಸರ್ ಕಮ್ಯಾಂಡಿಂಗ್, ರಾಷ್ಟ್ರೀಯ ರೈಫಲ್ಸ್ – ವಿರುದ್ಧ – ಕೇಂದ್ರ ತನಿಖಾ ದಳ ಹಾಗೂ ಇನ್ನೊಬ್ಬರು** ಪ್ರಕರಣದಲ್ಲಿ, ಈ ನ್ಯಾಯಾಲಯದ ನಿರ್ಣಯವನ್ನು ಉಲ್ಲೇಖಿಸಿದ್ದಾರೆ. ಕಾನೂನಿನ ಪ್ರಸ್ತಾವದ ಮೇಲೆ, ಅದರಲ್ಲಿ ಉಚ್ಚರಿಸಲಾದಂತೆ, ಅದು ಯಾವುದೇ ಹುರುಳಿಲ್ಲದ ದೂರಾಗಿರದಿದ್ದರೂ, ವಿಷಯದ ಆ ಅಂಶವು ಎಸ್‌ಎಆರ್‌ಎಫ್‌ಎಇಎಸ್‌ಐ ಅಧಿನಿಯಮದಡಿ ಉಪಬಂಧಿಸಲಾದ ವ್ಯವಹರಣೆಗಳಲ್ಲಿ ಪರಿಶೀಲಿಸಬಹುದಾದಂಥ ಅಂಶವೂ ಆಗಿದೆ. ಸದ್ಯದ ಸ್ವರೂಪದ ವಿಷಯದಲ್ಲಿ ಕ್ರಿಮಿನಲ್ ವ್ಯವಹರಣೆಯು ಸಮರ್ಥಿತವಾಗಿಲ್ಲ ಎಂದು ನಾವು ಈಗಾಗಲೇ ಸೂಚಿಸಿರುವಂಥ ಸನ್ನಿವೇಶದಲ್ಲಿ, ತನಿಖಾಧಿಕಾರಿ ಅಥವಾ ಕ್ರಿಮಿನಲ್ ನ್ಯಾಯಾಲಯದ ಮುಂದೆ ವ್ಯವಹರಣೆಗಳಿಗೆ ಆ ಅಂಶದ ಮೇಲೆಯೂ ಅಪೀಲುದಾರರನ್ನು ಗುರಿಪಡಿಸುವುದು ಸಮರ್ಥನೀಯವಾಗುವುದಿಲ್ಲ.

19. ಆ ದೃಷ್ಟಿಯಿಂದ, ಮೇಲೆ ನಿರೂಪಿಸಿದ ಎಲ್ಲ ಕಾರಣಗಳಿಗಾಗಿ ನಾವು ಈ ಮುಂದಿನಂತೆ ಆದೇಶ ಹೊರಡಿಸುತ್ತೇವೆ:

**ಆದೇಶ**

(i) ಪಿ.ಸಿ.ಸಂಖ್ಯೆ: 389/2016 ಮತ್ತು ಅದರಲ್ಲಿ ಹೊರಡಿಸಲಾದ ದಿನಾಂಕ: 20.5.2016ರ ಆದೇಶವನ್ನು ಹಾಗೆಯೇ ಇದರಲ್ಲಿನ ಅಪೀಲುದಾರರಿಗೆ ಸಂಬಂಧಪಡುವಷ್ಟರಮಟ್ಟಿಗೆ ಎಫ್‌ಐಆರ್ ಸಂಖ್ಯೆ: 0152/2016ನ್ನು ರದ್ದುಪಡಿಸಲಾಗಿದೆ.

(ii) ದೂರುದಾರರ ಕುಂದುಕೊರತೆಯ ಮಟ್ಟಿಗೆ, ಕಾನೂನಿನ ಅನುಸಾರ ಅನುಕ್ರಮವಾಗಿ ಡಿಆರ್‌ಟಿ ಮತ್ತು ಡಿಆರ್‌ಎಟಿಗಳಿಂದ ಐ.ಆರ್.ಸಂಖ್ಯೆ: 3044/2014ರಲ್ಲಿ ಹೊರಡಿಸಲಾದ ದಿನಾಂಕ: 12.06.2015ರ ಆದೇಶ ಮತ್ತು ಅಪೀಲು ಸಂಖ್ಯೆ: 523/2015ರಲ್ಲಿ ಹೊರಡಿಸಲಾದ ಆದೇಶ ದಿನಾಂಕ: 31.05.2017ರ ಆದೇಶವನ್ನು ಖಂಡಿಸಲು ದೂರುದಾರನು ಇಚ್ಛೆಸಿದಲ್ಲಿ ಕಾನೂನಿನ ಅನುಸಾರ ತನ್ನ ಪರಿಹಾರಗಳನ್ನು ಪಡೆಯುವ ಸ್ವಾತಂತ್ರ್ಯ ಅವನಿಗಿದೆ.

(iii) ತದನುಸಾರವಾಗಿ ಅಪೀಲನ್ನು ಪುರಸ್ಕರಿಸಲಾಗಿದೆ. ವೆಚ್ಚಗಳಿಗೆ ಯಾವುದೇ ಆದೇಶವಿಲ್ಲ.

(iv) ಇತ್ಯರ್ಥದಲ್ಲಿರುವ ಅರ್ಜಿಗಳು, ಯಾವುವಾದರೂ ಇದ್ದಲ್ಲಿ, ಅವುಗಳನ್ನು ಸಹ ವಿಲೆ ಮಾಡತಕ್ಕದ್ದು.

ನ್ಯಾ.
------------------
(ಆರ್. ಭಾನುಮತಿ)

ನ್ಯಾ.
------------------
(ಎಸ್. ಅಬ್ದುಲ್ ನಜೀರ್)

ನ್ಯಾ.
------------------
(ಎ.ಎಸ್. ಬೋಪಣ್ಣ)

ನವದೆಹಲಿ,
3ನೇ ಮಾರ್ಚ್ 2020.

*******

## ಕ್ಲೇಮು ನಿರಾಕರಣೆ

"ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರ ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು."